ದೆಹಲಿ ಕರ್ನಾಟಕ ಸಂಘದ

# ಅಭಿಮತ

ಜುಲೈ 2015
ಬೆಲೆ ರೂ. 1



## ದೆಹಲಿಯಲ್ಲಿ ಕನ್ನಡದ ಕೆಲಸ

ದೆಹಲಿ ಕರ್ನಾಟಕ ಸಂಘದ ಸಾಧನೆಗಳಿಗೆ
ಬೆಂಗಳೂರಿನಲ್ಲಿ ಅಭಿನಂದನೆ



ಮೈಸೂರಿನ ರಂಗಾಯಣ, ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ

## ರಂಗೇರಿಸಿದ ಸಂಘದ ರಂಗ ಕಲಾವಿದರು

ಅಭಿಮತ
ದೆಹಲಿ ಕರ್ನಾಟಕ ಸಂಘದ ಅಭಿಮತ
ಸಂಪುಟ 25 ಸಂಚಿಕೆ 10
ಜುಲೈ 2015, ಬೆಲೆ ರೂ. 1

**ಅಭಿಮತ ಸಂಪಾದಕ ಮಂಡಳಿ**

ಬಾಲಕೃಷ್ಣ ನಾಯ್ಕ್ ಡಿ.
ಸವಿತಾ ಇನಾಮದಾರ್
ಪ್ರಕಾಶ್ ಶೆಟ್ಟಿ ಉಳೆಪಾಡಿ
ಆಶಾಲತಾ ಎಂ.

**ದೆಹಲಿ ಕರ್ನಾಟಕ ಸಂಘದ ಕಾರ್ಯಕಾರಿ ಸಮಿತಿ**

**ಅಧ್ಯಕ್ಷ**
ವಸಂತ ಶೆಟ್ಟಿ ಬೆಳ್ಳಾರೆ: 9958697823

**ಉಪಾಧ್ಯಕ್ಷರು**
ಬಸವರಾಜು ಬಿ.ಕೆ.: 9810391608
ಆಶಾಲತಾ ಎಂ.: 9891249149

**ಪ್ರಧಾನ ಕಾರ್ಯದರ್ಶಿ**
ಸಿ.ಎಂ.ನಾಗರಾಜು: 9811325440

**ಕೋಶಾಧಿಕಾರಿ**
ಡಾ. ಅವನೀಂದ್ರನಾಥ್ ರಾವ್ 9868123382

**ಜಂಟಿ ಕಾರ್ಯದರ್ಶಿಗಳು**
ಎಸ್.ಸಿ. ಹೇಮಲತ: 9971121636
ಟಿ.ಎಂ. ಮೈಲಾರಪ್ಪ: 9013210175

**ಸಮಿತಿ ಸದಸ್ಯರು**
ಆಂಜನಿ ಗೌಡ: 9811165354
ರಾಧಾಕೃಷ್ಣ: 9818252183
ಪೂಜಾ ಪಿ. ರಾವ್: 9810882498
ವಿ.ವಿ.ಬಿರಾದಾರ: 9873005409
ಪಿ.ಸಿ.ಶ್ರೀನಿವಾಸ್: 9868170790
ಆನಂದ ಮುರಗೋಡ: 9312931233
ಆಶಾ ಶ್ಯಾಮಸುಂದರ್: 9871256177
ಬಸವರಾಜ ಮೇಟಿ: 9810282951
ಟಿ.ಪಿ. ಬೆಳ್ಳಿಯಪ್ಪ: 9654555795
ಕುಸುಮಾ ಪಿ. ನಂದರಗಿ 9868393955

**ವಿಶೇಷ ಆಹ್ವಾನಿತರು**
ಐ. ರಾಮ ಮೋಹನ್ ರಾವ್
ಡಾ. ಶರತ್ ಎಸ್. ಜವಳಿ
ಡಾ. ಪುರುಷೋತ್ತಮ ಬಿಳಿಮಲೆ

## ನೇರ ಮಾತು

ದೆಹಲಿ ಕರ್ನಾಟಕ ಸಂಘ ಕಳೆದ ಎರಡು ವರ್ಷಗಳಲ್ಲಿ ಸ್ಥಳೀಯ ಕಲಾವಿದರಿಗೆ ಸಾಕಷ್ಟು ವೇದಿಕೆಯನ್ನು ಕಲ್ಪಿಸುವ ವಿಶೇಷ ಪ್ರಯತ್ನ ಮಾಡಿದೆ. 'ಕನ್ನಡ ಭಾರತಿ'ಯಂತೆ ಸಂಘದ ಒಂದು ರಂಗ ಕಲಾವಿದರ ತಂಡವನ್ನು ಕಟ್ಟುವ ಕನಸಿನ ಮೊದಲ ಹೆಜ್ಜೆ. ಮೈಸೂರಿನ ರಂಗಾಯಣದ ಶ್ರೀ ಮಂಜುನಾಥ್ ಬೆಳಕೆರೆಯವರ ನಿರ್ದೇಶನದಲ್ಲಿ ರಂಗ ತರಬೇತಿ ಪಡೆದು ಯಶಸ್ವೀ ಪ್ರದರ್ಶನಗೊಂಡ ಸೇವಂತಿ ಪ್ರಸಂಗ ನಾಟಕ ಜೂನ್ ತಿಂಗಳಿನಲ್ಲಿ ಮೈಸೂರು ಮತ್ತು ಬೆಂಗಳೂರಿನಲ್ಲಿ ಪ್ರದರ್ಶನಗೊಂಡು ನನಸಾಗಿದೆ. ಇದು ಸಂಘದ ಸಾಂಸ್ಕೃತಿಕ ಚಟುವಟಿಕೆಯಲ್ಲಿ ಒಂದು ಅವಿಸ್ಮರಣೀಯ ಸಾಧನೆ. ಮೈಸೂರು ಮತ್ತು ಬೆಂಗಳೂರಿನಲ್ಲಿ ನಾಟಕ ಪ್ರದರ್ಶನಕ್ಕೆ ಅವಕಾಶವನ್ನು ಕಲ್ಪಿಸಿದ ಮೈಸೂರಿನ ರಂಗಾಯಣ, ಬೆಂಗಳೂರಿನ ಸಾಹಿತಿ ಮತ್ತು ಕಲಾವಿದರ ವೇದಿಕೆ ಹಾಗೂ ದೆಹಲಿಯ ಕನ್ನಡ ಭಾರತಿ ಸಂಸ್ಥೆಗಳಿಗೆ ಕೃತಜ್ಞತೆಗಳು.

ನಾಟಕವನ್ನು ಯಶಸ್ವಿ ಪ್ರಯೋಗಕ್ಕೆ ಸಿದ್ಧಪಡಿಸಿದ ಮೈಸೂರು ರಂಗಾಯಣದ ನಿರ್ದೇಶಕ ಶ್ರೀ ಮಂಜುನಾಥ ಬೆಳಕೆರೆ ಅವರ ಪ್ರಯತ್ನಕ್ಕೆ ಸಂಘ ಆಭಾರಿಯಾಗಿದೆ. ಅಚ್ಚು ಕಟ್ಟಾಗಿ ರಂಗ ಪ್ರಯೋಗ ಮಾಡಿದ ಸಂಘದ ರಂಗ ಕಲಾವಿದರು ಮತ್ತು ಸಹಕಾರ ನೀಡಿದ ಸದಸ್ಯರಿಗೂ ಕೃತಜ್ಞತೆಗಳು.

ದೆಹಲಿಯ ಜವಾಹರಲಾಲ ನೆಹರು ವಿಶ್ವವಿದ್ಯಾಲಯದಲ್ಲಿ ಕನ್ನಡ ಅಧ್ಯಾಯನ ಪೀಠ, ಸಂಘದ ಪಕ್ಕದ ಮೆಟ್ರೋ ನಿಲ್ದಾಣಕ್ಕೆ ಸರ್.ವಿಶ್ವೇಶ್ವರಯ್ಯ ನಾಮಕರಣ, ದೆಹಲಿಯ ವಿಶ್ವವಿದ್ಯಾಲಯದ ಎರಡು ಕನ್ನಡ ಪ್ರಾಧ್ಯಾಪಕರ ನೇಮಕಾತಿ ಪ್ರಕ್ರಿಯೆಗೆ ಚಾಲನೆ ಇತ್ಯಾದಿ ಕೆಲಸ ಕಾರ್ಯಗಳನ್ನು ಗುರುತಿಸಿ ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವೆ ಶ್ರೀಮತಿ ಉಮಾಶ್ರೀ ಅಧ್ಯಕ್ಷತೆಯಲ್ಲಿ ಮಾಜಿ ನ್ಯಾಯಮೂರ್ತಿ ಸದಾಶಿವ, ಮಾಜಿ ಸಭಾಪತಿ ಶ್ರೀ ಸುದರ್ಶನ್ ಅವರು "ದೆಹಲಿ ಕರ್ನಾಟಕ ಸಂಘ"ವನ್ನು ಅಭಿನಂದಿಸಿದ್ದು ಒಂದು ವಿಶೇಷ ಘಟನೆ. ಕರ್ನಾಟಕದ ಖ್ಯಾತ ಕಲಾವಿದರು, ಸಾಹಿತಿಗಳು, ಸಮಾಜ ಸೇವಕರು ಮತ್ತು ಬೆಂಗಳೂರಲ್ಲಿ ನೆಲೆನಿಂತ ಸಂಘದ ಸದಸ್ಯರ ಸಮ್ಮುಖದಲ್ಲಿ ನಡೆದ ಈ ಕಾರ್ಯಕ್ರಮ ಚಿರಕಾಲ ನೆನೆಯುವಂತದ್ದು ಮತ್ತು ಇನ್ನಷ್ಟು ಸಾಧಿಸಲು ಪ್ರೋತ್ಸಾಹ ನೀಡಿದಂತಾಗಿದೆ.

ಇದು ದೆಹಲಿ ಕರ್ನಾಟಕ ಸಂಘಕ್ಕೆ ಸಂದ ವಿಶೇಷ ಗೌರವ ಎನಿಸಿಕೊಂಡಿದೆ ಮತ್ತು ಸಂಘಕ್ಕಾಗಿ ದುಡಿದ ಹಿರಿಯರಿಗೆ ಸಲ್ಲಿಸಿದ ನಮನವಾಗಿದೆ. ಅ

*ವಸಂತ ಶೆಟ್ಟಿ ಬೆಳ್ಳಾರೆ, ಅಧ್ಯಕ್ಷರು*

## ಮುನ್ನೋಟ

ದೆಹಲಿ ಕರ್ನಾಟಕ ಸಂಘವು ಕನ್ನಡ ಕಲೆ, ಸಾಹಿತ್ಯ ಸಂಸ್ಕೃತಿಯನ್ನು ಉಳಿಸುವಲ್ಲಿ ಕೆಲಸ ಮಾಡುತ್ತಿದ್ದು, ಪ್ರತಿ ವರ್ಷ ಹೊರಗಿನಿಂದ ಬಂದ ಕಲಾವಿದರು ಕಾರ್ಯಕ್ರಮ ನೀಡುತ್ತಿದ್ದರು. ಆದರೆ ಪ್ರಸ್ತುತ ಕಾರ್ಯಕಾರಿ ಸಮಿತಿಯು ದೆಹಲಿಯ ಸ್ಥಳೀಯ ಕಲಾವಿದರಿಗೆ ವೇದಿಕೆ ನೀಡಿ ಪ್ರೋತ್ಸಾಹಿಸುವಲ್ಲಿ ಹೊಸ ಹೆಜ್ಜೆ ಇಟ್ಟಿದೆ.

ಪ್ರತಿ ವರ್ಷ ನಡೆಯುವ ಸಂಘದ ವಾರ್ಷಿಕೋತ್ಸವ ಹಾಗೂ ಇತರ ಕಾರ್ಯಕ್ರಮಗಳಲ್ಲಿ ಜನಪದ ನೃತ್ಯರೂಪಕಗಳು, ಜನಪದ ಹಾಡುಗಳು ಸುಗಮ ಸಂಗೀತ ಹಾಗೂ ನಾಟಕ ಮತ್ತಿತರ ಕಾರ್ಯಕ್ರಮಗಳನ್ನು ಮಾಡುತ್ತಿದ್ದು ಈ ಬಾರಿ ಸ್ಥಳೀಯ ಕಲಾವಿದರು ಪ್ರಸ್ತುತಪಡಿಸಿದ, ರಂಗಾಯಣ ಮೈಸೂರಿನ ಮಂಜುನಾಥ ಬೆಳಕೆರೆಯವರ ನಿರ್ದೇಶನದ ನಾಟಕ 'ಸೇವಂತಿ ಪ್ರಸಂಗ' ಮೈಸೂರಿನ ರಂಗಾಯಣದ ಭೂಮಿಗೀತ ಮತ್ತು ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ ಅದ್ಭುತವಾಗಿ ಮೂಡಿಬಂತು. ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ ಸಾವಿರಾರು ಪ್ರೇಕ್ಷಕರಿಂದ ಸಭಾಂಗಣ ತುಂಬಿ ತುಳುಕಿತು.

ಇದೇ ರೀತಿಯ ಇನ್ನೊಂದು ಪ್ರಯತ್ನವನ್ನು ಮೈಸೂರಿನ ದಸರಾ ಸಂದರ್ಭದಲ್ಲಿ ನಮ್ಮ ಸ್ಥಳೀಯ ಕಲಾವಿದರಿಂದ ಒಂದು ನಾಟಕ ಹಾಗೂ ನೃತ್ಯರೂಪಕ ತಂಡವನ್ನು ಕರ್ನಾಟಕಕ್ಕೆ ಕಳುಹಿಸುವ ಪ್ರಯತ್ನದಲ್ಲಿದ್ದೇವೆ. ಈಗಾಗಲೇ ರಜೆ ಕಳೆದು ಶಾಲಾ ಕಾಲೇಜು ಆರಂಭವಾಗಿದೆ. ಎಲ್ಲಾ ವಿದ್ಯಾರ್ಥಿ-ವಿದ್ಯಾರ್ಥಿನಿಯರಿಗೆ ಸಂಘದ ಶುಭಾಶಯಗಳು. ರಾಜಧಾನಿ ದೆಹಲಿಯಲ್ಲಿ ಪ್ರಪ್ರಥಮ ಬಾರಿಗೆ ಕರ್ನಾಟಕದ ಹೆಮ್ಮೆಯ ಕಲೆ ಯಕ್ಷಗಾನದ ಪ್ರದರ್ಶನವೊಂದು ಸಂಘದ ಸಭಾಂಗಣದಲ್ಲಿ ರಾತ್ರಿಯಿಡೀ ನಡೆಯಲಿದೆ. 'ಸಂಪೂರ್ಣ ದೇವಿ ಮಹಾತ್ಮೆ' ಎನ್ನುವ ಕಥಾ ಭಾಗವನ್ನು ತೆಂಕುತಿಟ್ಟಿನ ಪ್ರಸಿದ್ಧ ಕಲಾವಿದರ ಕೂಡುವಿಕೆಯಿಂದ ಆಯೋಜಕರು ಆಯೋಜಿಸಿದ್ದಾರೆ. ಈ ಕಾರ್ಯಕ್ರಮವನ್ನು ಆನಂದಿಸೋಣ.

ಈ ಬಾರಿ ಸಿವಿಲ್ ಸರ್ವಿಸ್‌ನಲ್ಲಿ ಕರ್ನಾಟಕದ 56 ವಿದ್ಯಾರ್ಥಿಗಳು ತೇರ್ಗಡೆಯಾಗಿದ್ದಾರೆ. ಇವರಿಗೆ ದೆಹಲಿ ಕರ್ನಾಟಕ ಸಂಘದ ಪರವಾಗಿ ಅಭಿನಂದನೆಗಳು. ದೆಹಲಿ ಕರ್ನಾಟಕ ಸಂಘದ ಸಾಂಸ್ಕೃತಿಕ ಸಮುಚ್ಚಯದ ದಶಮಾನೋತ್ಸವ ಸಮಾರಂಭದ ಸಮಾರೋಪ ಕಾರ್ಯಕ್ರಮವನ್ನು ಏರ್ಪಡಿಸುತ್ತಿದ್ದೇವೆ. ದಯಮಾಡಿ ಸ್ಥಳೀಯ ಕಲಾವಿದರು ಜಾನಪದ ನೃತ್ಯ ಮತ್ತು ಹಾಡುಗಳಿಗೆ ತಂಡದ ಹೆಸರನ್ನು ಸಂಘದ ಕಚೇರಿಯಲ್ಲಿ ನೋಂದಣಿ ಮಾಡಿಕೊಳ್ಳಬೇಕಾಗಿ ವಿನಂತಿ. ಅ

*ಸಿ.ಎಂ. ನಾಗರಾಜ, ಪ್ರಧಾನ ಕಾರ್ಯದರ್ಶಿ*

## ಸಂಘದ ಸಾಂಸ್ಕೃತಿಕ ಸಮುಚ್ಚಯದ ದಶಮಾನೋತ್ಸವದ ಅಂಗವಾಗಿ

ದೆಹಲಿ ಕರ್ನಾಟಕ ಸಂಘದ ಸಾಂಸ್ಕೃತಿಕ ಸಮುಚ್ಚಯದ ದಶಮಾನೋತ್ಸವ ಸಮಾರಂಭದ ಸಮಾರೋಪ ಕಾರ್ಯಕ್ರಮವನ್ನು ಆಗಸ್ಟ್ ತಿಂಗಳ 2ರಂದು ನಡೆಸಲು ಉದ್ದೇಶಿಸಲಾಗಿದೆ.

ಈ ಕಾರ್ಯಕ್ರಮದಲ್ಲಿ ಜಾನಪದ ಸಮೂಹ ನೃತ್ಯ ಮತ್ತು ಜಾನಪದ ಸಮೂಹ ಹಾಡುಗಳನ್ನು ನೀಡಲಿಚ್ಛಿಸುವ ಸಂಘದ ಸದಸ್ಯರು ತಮ್ಮ ತಂಡದ ಹೆಸರುಗಳನ್ನು ಸಂಘದಲ್ಲಿ ನೋಂದಾಯಿಸಬೇಕಾಗಿ ವಿನಂತಿ.

ಪ್ರತೀ ತಂಡದಲ್ಲಿ ಕನಿಷ್ಠ 6ಜನ ಇರಬೇಕು. ಒಬ್ಬರಿಗೆ ಒಂದು ತಂಡದಲ್ಲಿ ಮಾತ್ರ ಭಾಗವಹಿಸಲು ಅವಕಾಶ.

ಪ್ರಥಮವಾಗಿ ನೋಂದಾಯಿಸಿಕೊಂಡ 20 ತಂಡಕ್ಕೆ ಮಾತ್ರ ಅವಕಾಶ.

ಜಾನಪದ ಸಮೂಹ ನೃತ್ಯ ತಂಡಕ್ಕೆ ಮಾತ್ರ ರೂ. 5000/–ದಂತೆ ಗೌರವ ಧನವನ್ನು ನೀಡಲಾಗುವುದು.

## ಕನ್ನಡ ತರಗತಿಗಳು

ದೆಹಲಿ ಕರ್ನಾಟಕ ಸಂಘದಲ್ಲಿ ಕನ್ನಡ ತರಗತಿಗಳನ್ನು ಪ್ರತಿ ಶನಿವಾರ ಮತ್ತು ಭಾನುವಾರದಂದು ಆರಂಭಿಸಲಾಗಿದೆ. ಕನ್ನಡ ಕಲಿಯಲಿಚ್ಛಿಸುವವರು ತಮ್ಮ ಹೆಸರನ್ನು ಸಂಘದಲ್ಲಿ ನೊಂದಾಯಿಸಬೇಕಾಗಿ ವಿನಂತಿ.

## ಸಂಘದ ಗುರುತು ಚೀಟಿ

ದೆಹಲಿ ಕರ್ನಾಟಕ ಸಂಘದ ಸದಸ್ಯರಿಗೆ (ದೆಹಲಿ ಮತ್ತು ಎನ್.ಸಿ.ಆರ್. ನಲ್ಲಿರುವವರಿಗೆ ಮಾತ್ರ) ಐಡೆಂಟಿಟಿ ಕಾರ್ಡ್‌ನ್ನು ನೀಡುವ ಪ್ರಕ್ರಿಯೆಯನ್ನು ಪ್ರಾರಂಭಿಸಲಾಗಿದೆ. ಸದಸ್ಯರು ತಮ್ಮ ವಿಳಾಸ, ದೂರವಾಣಿಗಳು ಬದಲಾಗಿದ್ದಲ್ಲಿ ಕೂಡಲೇ ಲಿಖಿತ ಮೂಲಕ ಸಂಘದ ಕಾರ್ಯಾಲಯಕ್ಕೆ ತಿಳಿಸಬೇಕಾಗಿ ವಿನಂತಿ. ಜತೆಗೆ ಇತ್ತೀಚಿನ ಭಾವಚಿತ್ರವನ್ನು ಕಳುಹಿಸಿರಿ.

*ಪ್ರಧಾನ ಕಾರ್ಯದರ್ಶಿ*

## ಸಂಘದಲ್ಲಿ ಇತರ ಸಂಘ ಸಂಸ್ಥೆಗಳ ಕಾರ್ಯಕ್ರಮ

**25 ಜುಲೈ 2015**

**ಶನಿವಾರ ಸಂಜೆ : 4.30 ಗಂಟೆಗೆ**

**ಜನಕಪುರಿ ಕನ್ನಡ ಕೂಟ ದೆಹಲಿ ಕರ್ನಾಟಕ ಸಂಘದ ಸಹಕಾರದೊಂದಿಗೆ**
**ಮಹಿಳಾ ಮತ್ತು ಮಕ್ಕಳ ದಿನಾಚರಣೆ**
**ಹಾಗೂ ಕೂಟರತ್ನ ಪ್ರಶಸ್ತಿ ಪ್ರದಾನ**

**ಶ್ರೀ ಗುರುಪಂಡಿತ ಪುಟ್ಟರಾಜ ಸಾಂಸ್ಕೃತಿಕ ಜನಪದ ಕಲಾ ಯುವಕ ಸಂಘ, ಸಿಂಧನೂರು ರಾಯಚೂರು ತಂಡದಿಂದ ಜಾನಪದ ಗೀತೆ, ಭಕ್ತಿಗೀತೆ ಮತ್ತು ಚಲನಚಿತ್ರಗೀತೆಗಳ ಸಂಗಮ ಕಾರ್ಯಕ್ರಮವನ್ನು ಆಯೋಜಿಸಿದೆ.**

---

**26 ಜುಲೈ 2015**

**ಭಾನುವಾರ ಸಂಜೆ 5.00 ಗಂಟೆಗೆ**

**ಕನ್ನಡದ ಷೇಕ್ಸ್‌ಪಿಯರ್ ಕಂದಗಲ್ ಹನುಮಂತರಾಯರ**

**ರಕ್ತರಾತ್ರಿ ನಾಟಕದ ಆಯ್ದ ಭಾಗ**

**ಪ್ರಸ್ತುತಿ : ದಿನಕರ**
**ನಿರ್ದೇಶನ : ಶಿವಾನಂದ ಇಂಗಳೇಶ್ವರ**

## ವೈದ್ಯಕೀಯ ಸಲಹೆಗಳು

**ಡಾ. ನಿರಂಜನ್ ನಾಯ್ಕ್,** MBBS, MS (AIIMS), ONCO-SURGERY (IRCH, AIIMS) ಅವರಿಂದ ಕ್ಯಾನ್ಸರ್ ಸಂಬಂಧಿತ ರೋಗಗಳಿಗೆ ಉಚಿತ ಸಲಹೆ ಭಾನುವಾರ 19 ಜುಲೈ, 2015ರಂದು ಬೆಳಿಗ್ಗೆ 10 ಗಂಟೆಯಿಂದ.

**ಡಾ. ಸಾಯಿಪ್ರಶಾಂತಿ ಶೆಟ್ಟಿ** B.A.M.S., Msc, Yoga Therapy ಅವರಿಂದ ಆಯುರ್ವೇದ ಮತ್ತು ಯೋಗ ಸಂಬಂಧಿತ ರೋಗಗಳಿಗೆ ಉಚಿತ ಸಲಹೆ ಭಾನುವಾರ 19 ಜುಲೈ, 2015ರಂದು ಸಾಯಂಕಾಲ 4 ಗಂಟೆಯಿಂದ.

**ಡಾ. ಗುರುರಾಜ ಸಂಗೊಂದಿಮಠ** MS, FNB, Spine Surgeon, ಅವರಿಂದ ಬೆನ್ನು ಮೂಳೆಗೆ ಸಂಬಂಧಿತ ರೋಗಗಳಿಗೆ ಉಚಿತ ವೈದ್ಯಕೀಯ ಸಲಹೆ ಭಾನುವಾರ 26 ಜುಲೈ, 2015 ರಂದು ಬೆಳಿಗ್ಗೆ 11 ಗಂಟೆಯಿಂದ.

**ಡಾ. ಭೀಮ್ ಭಟ್** M.D. (AYU) ಅವರಿಂದ ಉಚಿತ ಆಯುರ್ವೇದ ವೈದ್ಯಕೀಯ ಸಲಹೆ ಭಾನುವಾರ 26 ಜುಲೈ, 2015 ರಂದು ಸಾಯಂಕಾಲ 4 ಗಂಟೆಯಿಂದ.

**ದೆಹಲಿ ಕರ್ನಾಟಕ ಸಂಘದ ಸುಸಜ್ಜಿತವಾದ ಆರ್ಟ್ ಗ್ಯಾಲರಿ ಕಲಾ ಪ್ರದರ್ಶನಕ್ಕಾಗಿ ಸಿದ್ಧವಿದೆ.**
**ಹೆಚ್ಚಿನ ಮಾಹಿತಿಗಾಗಿ ದೆಹಲಿ ಕರ್ನಾಟಕ ಸಂಘದ ಕಾರ್ಯಾಲಯವನ್ನು ಸಂಪರ್ಕಿಸಿರಿ. ಫೋನ್ : 8860848585 – 011–26109615, 26104818**



# ಡಾ. ಬಿ.ವಿ. ಅಡ್ಕೋಳಿಯವರಿಗೆ ದೆಹಲಿಯಿಂದ ಭಾವಪೂರ್ಣ ವಿದಾಯ

ದೆಹಲಿ ಕರ್ನಾಟಕ ಸಂಘದ ಹಿರಿಯ ಸದಸ್ಯ ಡಾ. ಬಿವಿ. ಅಡ್ಕೋಳಿ ಅವರು ದೆಹಲಿ ಬಿಟ್ಟು ಪಾಂಡಿಚೇರಿಗೆ ಹೋಗುವ ಸಂದರ್ಭದಲ್ಲಿ ದೆಹಲಿ ಕರ್ನಾಟಕ ಸಂಘ ಮತ್ತು ಗೋಕರ್ಣ ಮಂಡಳದ ಆಶ್ರಯದಲ್ಲಿ ಸಂಘದಲ್ಲಿ ಇದೇ ಜೂನ್ 28ರಂದು ವಿದಾಯ ಸಮಾರಂಭವನ್ನು ಏರ್ಪಡಿಸಲಾಗಿತ್ತು. ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತಾಡಿದ ಸಂಘದ ಅಧ್ಯಕ್ಷ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ ಅವರು ಡಾ. ಬಿ.ವಿ. ಅಡ್ಕೋಳಿ ಅವರು ನಿಷ್ಪಕ್ಷಪಾತವಾಗಿ ದೆಹಲಿ ಕರ್ನಾಟಕ ಸಂಘದ ಎಲ್ಲರನ್ನೂ ಹುರಿದುಂಬಿಸುವ ಕೆಲಸ ಮಾಡಿದ್ದಾರೆ ಎಂದು ನುಡಿದರು. ಡಾ. ಅಡ್ಕೋಳಿಯವರು ಗಂಗಾನದಿಯ ತೀರ್ಥದಂತೆ ಸದಾ ಎಲ್ಲರೂ ನೆನಪಿಸಿಕೊಳ್ಳುವ ಅತ್ಯಂತ ಸ್ನೇಹಮಯಿ ಕನ್ನಡಿಗ ಎಂದರು.

ಡಾ. ಅಡ್ಕೋಳಿ ಅವರು ಈ ಸಂದರ್ಭದಲ್ಲಿ ಮಾತಾಡುತ್ತಾ 'ದಕ್ಷತೆ, ಪ್ರಾಮಾಣಿಕತೆ ಮತ್ತು ವಿನಮ್ರತೆಗೆ ಕನ್ನಡಿಗರು ಹೆಸರಾದವರು. ಅಂತಹ ಕೆಲವು ಗುಣಗಳು ನನ್ನಲ್ಲಿ ಪ್ರತಿಬಿಂಬಿತವಾಗಿದ್ದರೆ ಅದು ನಾನು ಕನ್ನಡಿಗನಾದುದರಿಂದ' ಎಂದು ಹೇಳಿದರು. ದೆಹಲಿ ಕರ್ನಾಟಕ ಸಂಘದಲ್ಲಿ ಕಾರ್ಯ ಚಟುವಟಿಕೆಗಳನ್ನು ನಡೆಸಲು ಅತ್ಯಂತ ಕಾರ್ಯಬದ್ಧ ವ್ಯಕ್ತಿಗಳನ್ನು ಪಡೆದಿದೆ ಎಂದರು. ಪ್ರೀತಿ–ಪ್ರೇಮದಿಂದ ಸಮಾಜದ ಸೇವೆ ಮಾಡುವುದೇ ನನ್ನ ಜೀವನ ಆಧ್ಯಾತ್ಮ ಧರ್ಮ ಎಂದು ತಿಳಿಸಿದರು. 'ದೆಹಲಿಯ ಕನ್ನಡಿಗರು ನನಗೆ ಅವಕಾಶ ಮಾಡಿಕೊಟ್ಟಿದ್ದರಿಂದ ನಾನೊಂದಿಷ್ಟು ಸಣ್ಣ ಪುಟ್ಟ ಕೆಲಸಗಳನ್ನು ಮಾಡಲು ಸಾಧ್ಯವಾಯಿತು. ಅದಕ್ಕಾಗಿ ನಾನು ನಿಮಗೆಲ್ಲರಿಗೂ ಸದಾ ಆಬಾರಿಯಾಗಿರುತ್ತೇನೆ' ಎಂದು ನುಡಿದರು.

ಈ ಸಂದರ್ಭದಲ್ಲಿ ಮಾತಾಡಿದ ವಿದ್ವಾಂಸ ಡಾ. ಪುರುಷೋತ್ತಮ ಬಿಳಿಮಲೆ ಅವರು ಡಾ. ಅಡ್ಕೋಳಿ ಅವರು ನೀಡಿದ ಸಾಂಸ್ಕೃತಿಕ ಹಾಗೂ ಸಾಮಾಜಿಕ ಕೊಡುಗೆಗಳನ್ನು ಸ್ಮರಿಸಿದರು. ದೆಹಲಿ ಕನ್ನಡ ರಂಗಭೂಮಿಗೆ ಗೋಕರ್ಣ ಮಂಡಳದ ಅತಿ ದೊಡ್ಡ ಕೊಡುಗೆ ಅವರು ತೊಂಭತ್ತರ ದಶಕದಲಿ ಪ್ರಸ್ತುತ ಪಡಿಸಿದ 'ಸದ್ಗತಿ' ನಾಟಕ. ಅದರಲ್ಲಿ ಡಾ. ಅಡ್ಕೋಳಿ ಅವರು ನಿರ್ವಹಿಸಿದ ದಲಿತನ ಪಾತ್ರ ಸಾಮಾಜಿಕ ಕಳಕಳಿಯಿರುವವರಿಗೆ ಬಹಳ ಮುಖ್ಯವಾಗಿರುತ್ತದೆ. ಒಂದು ಉಚ್ಚ ವರ್ಗದಲ್ಲಿ ಜನಿಸಿದ ವ್ಯಕ್ತಿ ಸಮಾಜದ ಅತ್ಯಂತ ನಿಕೃಷ್ಟ ಅವಸ್ಥೆಯಲ್ಲಿರುವ ದಲಿತನ ಪಾತ್ರವನ್ನು ನಿರ್ವಹಿಸಿ ತನ್ನನ್ನು ಪೂರ್ತಿ ಕಳಚಿಕೊಂಡು ಇನ್ನೊಂದು ಪಾತ್ರಕ್ಕೆ ಪ್ರವೇಶ ಮಾಡಿ ಅದನ್ನು ಅಷ್ಟೇ ಪರಿಣಾಮಕಾರಿಯಾಗಿ ಪ್ರೇಕ್ಷಕರಿಗೆ ಮುಟ್ಟಿಸುವಂತಹ ಒಂದು ಅದ್ಭುತವಾದ ನಟನೆಯನ್ನು ಡಾ. ಅಡ್ಕೋಳಿಯವರು ರೂಪಿಸಿದರು ಎಂದರು. ಅವರೊಳಗಿನ ಸೃಜನಶೀಲ ಕಲಾವಿದನನ್ನು ಮುಂದಿನ ದಿನಗಳಲ್ಲಿ ಬಳಸಿಕೊಳ್ಳಲು ನಮಗೆ ಆಗಲಿಲ್ಲ ಎಂದು ಡಾ. ಬಿಳಿಮಲೆ ಅವರು ಬೇಸರ ವ್ಯಕ್ತ ಪಡಿಸಿದರು. ಗೋಕರ್ಣ ಮಂಡಳವು ನಡೆಸಿದ ಯಕ್ಷಗಾನ ತಾಳಮದ್ದಳೆ ಗದಾಯುದ್ಧವನ್ನು ಸ್ಮರಿಸಿದ ಡಾ. ಬಿಳಿಮಲೆ ಅವರು ಡಾ. ಅಡ್ಕೋಳಿ ಅವರು ಧರ್ಮರಾಯನ ಪಾತ್ರ ವಹಿಸಿ, ಆ ಪಾತ್ರಕ್ಕೆ ಬೇಕಾದ ತಯಾರಿಯನ್ನು ಬಹಳಷ್ಟು ಅಧ್ಯಯನ ನಡೆಸಿ ಮಾಡಿದರು. ಒಂದು ಪಾತ್ರದ ಒಳಪ್ರವೇಶಕ್ಕೆ ಅವರು ತೆಗೆದುಕೊಳ್ಳುವ ಶ್ರಮ ನಮಗೆಲ್ಲರಿಗೂ ಆದರ್ಶಮಯವಾದುದು ಎಂದು ಹೇಳಿದರು.

ಡಾ. ಅಡ್ಕೋಳಿಯವರ ಅಂತಃಕರಣವು

## ಸಂಘದ ಹಿತೈಷಿ ಬಿ.ವಿ. ಅಡ್ಕೋಳಿ



ಎಲೆಮರೆಯ ಕಾಯಿಯಂತೆ ಇದ್ದು ಪ್ರತಿಫಲಾಪೇಕ್ಷೆಯಿಲ್ಲದೇ ಸಮಾಜದ ಕಾರ್ಯಗಳಲ್ಲಿ ತೊಡಗಿಕೊಂಡು ಇರುವವರು ಕಡಿಮೆ. ಅಂತಹವರಲ್ಲಿ ಒಬ್ಬರು ಬಿ.ವಿ. ಅಡ್ಕೋಳಿ ಅವರು. ದೇಶದ ಪ್ರತಿಷ್ಠಿತ ಆಲ್ ಇಂಡಿಯಾ ಇನ್‌ಸ್ಟ್ಯೂಟ್ ಆಫ್ ಮೆಡಿಕಲ್ ಸಯನ್ಸ್‌ನಲ್ಲಿ ವೈದ್ಯಕೀಯ ಶಿಕ್ಷಣತಜ್ಞರಾಗಿ ದುಡಿದು 2012ರಲ್ಲಿ ನಿವೃತ್ತಿ ಹೊಂದಿ ಮತ್ತೆ ರಾಷ್ಟ್ರೀಯ ಆರೋಗ್ಯ ಪೋರ್ಟಲ್‌ಗೆ ಸಲಹಾಗಾರರಾಗಿ ಕೆಲಸ ಮಾಡಿ ಈಗ ದೆಹಲಿ ತೊರೆಯುತ್ತಿದ್ದಾರೆ. ಅವರು ದೇಶದಲ್ಲಿ ಮೊದಲಬಾರಿಗೆ ಆರೋಗ್ಯ ಪರಿಣಿತರಿಗೆ ಸ್ನಾತಕೋತ್ತರ ಶಿಕ್ಷಣ ಕಾರ್ಯಕ್ರಮವನ್ನು ರೂಪಿಸುವಲ್ಲಿ ತೊಡಗಿಸಿಕೊಂಡಿದ್ದರು. ಅವರು ಸೌದಿ ಅರೇಬಿಯಾದಲ್ಲಿಯೂ ಎರಡು ವರ್ಷ ತಮ್ಮ ಸೇವೆಯನ್ನು ಸಲ್ಲಿಸಿ ಬಂದಿದ್ದಾರೆ.

ತಮ್ಮ ವೃತ್ತಿ ಜೀವನದಲ್ಲಿ ಅತ್ಯಂತ ಉನ್ನತ ಸಾಧನೆಗಳನ್ನು ಮಾಡಿರುವ ಡಾ. ಬಾಲಚಂದ್ರ ವಿಷ್ಣು ಅಡ್ಕೋಳಿ ಅವರು ದೆಹಲಿಯ ಕನ್ನಡ ಸಾಂಸ್ಕೃತಿಕ ಕ್ಷೇತ್ರಗಳಲ್ಲಿಯೂ ಅಪೂರ್ವವಾದ ಕೊಡುಗೆಗಳನ್ನು ನೀಡಿದ್ದಾರೆ. ದೆಹಲಿ ಕರ್ನಾಟಕ ಸಂಘ ಮತ್ತು ಗೋಕರ್ಣ ಮಂಡಳಗಳಲ್ಲಿ ಅವರು ಸಂಘಟನೆ, ಆಡಳಿತ, ಕಾರ್ಯಕ್ರಮ ಸಂಯೋಜನೆಗಳಲ್ಲಿ ತಮ್ಮ ಸೇವೆಯನ್ನು ಸಲ್ಲಿಸಿದಲ್ಲದೇ, ಅಭಿನಯ ಮತ್ತು ನಿರ್ದೇಶನಗಳ ಮೂಲಕ ದೆಹಲಿಯ ಕನ್ನಡ ರಂಗಭೂಮಿ ಕ್ಷೇತ್ರದಲ್ಲಿ ತಮ್ಮ ಅನುಪಮವಾದ ಕೊಡುಗೆಯನ್ನು ನೀಡಿದ್ದಾರೆ. ದೆಹಲಿ ಕರ್ನಾಟಕ ಸಂಘವು ನಡೆಸುತ್ತಿದ್ದ ಏಕಾಂಕ ನಾಟಕ ಸ್ಪರ್ಧೆಯ ಉತ್ತುಂಗ ಕಾಲವಾದಲ್ಲಿ ಡಾ. ಅಡ್ಕೋಳಿ ಅವರು ಶ್ರೀ ಎಸ್.ಜಿ. ಹೆಗಡೆ ಅವರ ಜತೆ ಪುತ್ಥಳಿ ಮತ್ತು ಸದ್ಗತಿ ನಾಟಕಗಳ ಮೂಲಕ ದೆಹಲಿಯ ಕನ್ನಡ ರಂಗಭೂಮಿಯಲ್ಲಿಯೇ ಸಂಚಲನವಾಗುವಂತಹ

ತೀವ್ರವಾಗಿ ಸ್ಪಂದಿಸುತ್ತದೆ ಎಂದು ನುಡಿದ ಡಾ. ಬಿಳಿಮಲೆ ಅವರು ಕನ್ನಡದ ಹಿರಿಯ ಕತೆಗಾರರೊಬ್ಬರು ದೆಹಲಿಗೆ ಬಂದಾಗ ಅವರಿಗೆ ತೀವ್ರ ಎದೆನೋವು ಕಾಣಿಸಿಕೊಂಡು ಅವರನ್ನು ಆಲ್ ಇಂಡಿಯಾ ಇನ್‌ಸ್ಟ್ಯೂಟ್ ಆಫ್ ಮೆಡಿಕಲ್ ಸಯನ್ಸ್‌ಗೆ (ಏಮ್ಸ್) ಸೇರಿಸಬೇಕಾಯಿತು. ಆ ಸಂದರ್ಭದಲ್ಲಿ ಡಾ. ಅಡ್ಕೋಳಿ ಅವರು ಎಲ್ಲಾ ವ್ಯವಸ್ಥೆಗಳು ಸರಿಯಾಗಿ ನಡೆಯುವಂತೆ ಬಹಳಷ್ಟು ಶ್ರಮವಹಿಸಿದರು ಎಂದರು. ಡಾ. ಅಡ್ಕೋಳಿಯವರು ಕಾರ್ಯಕ್ರಮ ನಿರ್ವಹಣೆಗಳ ಸಂದರ್ಭಗಳಲ್ಲಿಯೂ ಕಟ್ಟುನಿಟ್ಟಾಗಿ ಎಲ್ಲವನ್ನೂ ಬರೆದು ಉತ್ತಮ ಪೋಷಾಕುಗಳನ್ನು ಧರಿಸಿ ಏನೂ ತಪ್ಪಿಲ್ಲದಂತೆ ಕಾರ್ಯ ನಿರ್ವಹಿಸುತ್ತಿದ್ದರು ಎಂದರು.

ಸಂಘದ ಮಾಜಿ ಕಾರ್ಯದರ್ಶಿ ಶ್ರೀ ಎಸ್. ಕೃಷ್ಣ ಭಟ್ ಅವರು ಮಾತಾಡಿ 'ಅಡ್ಕೋಳಿಯವರು ದೆಹಲಿ ಕರ್ನಾಟಕ ಸಂಘದ ಕಾಣದ ಕಲ್ಲು' ಎಂದು ನುಡಿದರು. ಅವರು ಸಂಘದ ಮಹತ್ತರ ಕೆಲಸಗಳ ಒತ್ತಡಗಳನ್ನು, ರಾಜಕೀಯಗಳನ್ನು ಅತ್ಯಂತ ಸೂಕ್ಷ್ಮವಾಗಿ ಸ್ಪಂದಿಸಿ ನಿವಾರಿಸಿಕೊಳ್ಳುವ ಸಾಮಾರ್ಥ್ಯ ಹೊಂದಿದ್ದಾರೆ ಎಂದರು. ಸಂಘದ ಹಳೇ ಕಟ್ಟಡವಿದ್ದ ಸಂದರ್ಭದಲ್ಲಿ ಹೊಸ ಸಭಾಂಗಣದ ಕುರಿತು ಎರಡು ರೀತಿಯ ವಿಚಾರಗಳಿದ್ದಾಗ ಅವುಗಳನ್ನು ಉತ್ತಮ ಮಟ್ಟದಲ್ಲಿ ಚರ್ಚಿಸಿದರು. ಮಾಜಿ ಅಧ್ಯಕ್ಷ ಕೆ.ಆರ್. ನಾಗರಾಜ್ ಸೇರಿದಂತೆ ಸಂಘದ ಎಲ್ಲಾ ಅಧ್ಯಕ್ಷರು ಅವರಿಂದ ಸಮಯಾನುಸಾರ ಸಲಹೆ ಸೂಚನೆಗಳನ್ನು ಕೇಳಿ ಸಂಘದ ಕಾರ್ಯಗಳನ್ನು ನಡೆಸುತ್ತಿದರು ಎಂದರು. ಅವರೊಬ್ಬ ಕನ್ನಡ ಚೈತನ್ಯವಾಗಿದ್ದು ಮುಂದೆ ನಿಂತು ಕೆಲಸ ಮಾಡುವವರಿಗೆ ಪೂರಕವಾಗಿ ಆಗಾಗ ಸಲಹೆ ಸೂಚನೆಗಳನ್ನು ನೀಡಿ ಸಕರಾತ್ಮಕ ಪ್ರಚೋದನೆಯ ಪ್ರತೀಕವಾಗಿದ್ದಾರೆ ಎಂದು ಶ್ರೀ ಕೃಷ್ಣ ಭಟ್ ಅವರು ವಿವರಿಸಿದರು. ಸಂಘದ ನಿರ್ಮಾಣದಲ್ಲಿ ಮಹತ್ತರ ಪಾತ್ರವನ್ನು ನಿರ್ವಹಿಸಿದ ಡಾ. ಅಡ್ಕೋಳಿಯವರಿಗೆ ಶುಭ ಹಾರೈಸಿದರು.

ಶ್ರೀ ನರಸಿಂಹ ಹೆಗಡೆ ಅವರು ಈ ಸಂದರ್ಭದಲ್ಲಿ ಮಾತಾಡುತ್ತಾ ಡಾ. ಅಡ್ಕೋಳಿಯವರು ಅತ್ಯಂತ ಸುಸಂಸ್ಕೃತ, ವಿದ್ಯಾವಂತರಾದ ದೊಡ್ಡ ಕುಟುಂಬದಿಂದ ಬಂದವರಾಗಿದ್ದು ದೆಹಲಿಯಲ್ಲಿ ಕನ್ನಡದ ಸಂಸ್ಕೃತಿಯನ್ನು ಬೆಳೆಸಲು ಮತ್ತು ಕನ್ನಡದ ಜನರಿಗೆ ನಿಸ್ವಾರ್ಥ ಸೇವೆ ನೀಡಲು ಬಹಳಷ್ಟು ಶ್ರಮಿಸಿದ್ದಾರೆ ಎಂದರು. ಅವರು ದೆಹಲಿಗೆ ಬಂದ ಸಂದರ್ಭದಲ್ಲಿ ಮೊದಲ ಕಾರ್ಯಕ್ರಮದಲ್ಲಿಯೇ ಡಮರು ಬಾರಿಸಿ ಜಾನಪದ ಗೀತೆಯನ್ನು ಹಾಡಿ ಕುಣಿದಾಡಿ ಜನರ ಜತೆ ಬೆರೆತಿದ್ದಾರೆ ಎಂದರು. ದೆಹಲಿ ಕರ್ನಾಟಕ ಸಂಘ ನಡೆಸಿದ ಡಾ. ರಾಜ್‌ಕುಮಾರ್ ನೈಟ್ ಕಾರ್ಯಕ್ರಮದಲ್ಲಿ ಮತ್ತು ದೆಹಲಿಯಲ್ಲಿ ನಡೆಯುತ್ತಿದ್ದ ಏಕಾಂಕ ನಾಟಕ ಸ್ಪರ್ಧೆಯ ಸಂದರ್ಭಗಳಲ್ಲಿ ಅವರು ಮುಂಚೂಣಿಯಲ್ಲಿದ್ದು ಕಾರ್ಯಕ್ರಮಗಳು ಯಾವುದೇ ಲೋಪದೋಷವಿಲ್ಲದೆ ನಡೆಯಲು ಶ್ರಮಿಸಿದ್ದಾರೆ ಎಂದು ಶ್ರೀ ನರಸಿಂಹ ಹೆಗಡೆ ಹೇಳಿದರು. ಏಮ್ಸ್‌ನಲ್ಲಿ ಅವರು ಅದೆಷ್ಟೋ ಮಂದಿಯ ವೈದ್ಯಕೀಯ ಚಿಕಿತ್ಸೆಗಾಗಿ ಸಹಾಯ ಮಾಡಿದ್ದಾರೆ. ಈಗ ಅವರು ನಿವೃತ್ತಿ ಆದರೂ ಹೊಸ ಅವಕಾಶಗಳು ಅವರನ್ನು ಹುಡುಕುತ್ತಾ ಬಂದು ಡಾ. ಅಡ್ಕೋಳಿ ಅವರು ಪಾಂಡಿಚೇರಿಗೆ ಹೋಗುವ ಸಂದರ್ಭದಲ್ಲಿ ಶುಭ ಹಾರೈಸಿದರು.

ಶ್ರೀ ಸಖಾರಾಮ್ ಉಪ್ಪೂರು ಅವರು ಮಾತಾಡುತ್ತಾ ಸದಾ ಶಾಂತಚಿತ್ತರಾಗಿದ್ದು, ಪ್ರಸನ್ನವದನರಾಗಿರುವ ಡಾ. ಅಡ್ಕೋಳಿ ಅವರು ಎಲೆಮರೆಯ ಕಾಯಿಯಾಗಿ ಎಲ್ಲಾ ಮಹತ್ವದ ಕೆಲಸಗಳಲ್ಲೂ ತೊಡಗಿಸಿಕೊಳ್ಳುತ್ತಾರೆ. ಸಂಘದ ಏಕಾಂಕ ನಾಟಕಗಳನ್ನು ನಡೆಸಿ ಕೊಡುವಲ್ಲಿ ಬಹಳ ಸಹಕಾರ ನೀಡಿದ್ದಾರೆ. ಎಲ್ಲಾ ಹಂತಗಳಲ್ಲೂ ಬಹಳ ಕ್ರಮಬದ್ಧವಾಗಿ, ನಿಷ್ಪಕ್ಷಪಾತವಾಗಿ ಮತ್ತು ಸಂತೋಷದಿಂದ ತನ್ನನ್ನು ತಾನು ತೊಡೆಗಿಸಿಕೊಂಡು ಕನ್ನಡಕ್ಕಾಗಿ ಡಾ. ಅಡ್ಕೋಳಿ ಅವರು ಕೆಲಸ ಮಾಡಿದ್ದಾರೆ ಎಂದರು. ಡಾ. ಅಡ್ಕೋಳಿಯವರು ದೆಹಲಿಯ ಕನ್ನಡ ಸಂಘ ಸಂಸ್ಥೆಗಳಿಗೆ ಮಾಡಿರುವ ಸೇವೆ ಬೆಲೆಕಟ್ಟಲಾಗದು ಎಂದು ಶ್ರೀ ಸಖಾರಾಮ ಉಪ್ಪೂರು ನುಡಿದರು.

ಡಾ. ಅಡ್ಕೋಳಿಯವರಿಗೆ ಶುಭ ವಿದಾಯಕೋರಿ ಗೋಕರ್ಣ ಮಂಡಳದ ಅಧ್ಯಕ್ಷ ಶ್ರೀ ನಾರಾಯಣ ಭಟ್, ಶ್ರೀ ಶ್ರೀರಾಮ ಹೆಗಡೆ, ಶ್ರೀ ಚೆನ್ನು ಎಸ್. ಮಠದ, ಶ್ರೀ ಬಾಲಕೃಷ್ಣ ನಾಯ್ಕ್, ಶ್ರೀ ಕೆ.ಎಸ್.ಜಿ. ಶೆಟ್ಟಿ, ಶ್ರೀ ವಿಷ್ಣು ಭಟ್, ಶ್ರೀ ಶಿವರಾಮ ಶಾಸ್ತ್ರಿ, ಶ್ರೀ ಸುಧೀರ್ ಫಡ್ನೀಸ್, ಶ್ರೀ ರಾಧಾಕೃಷ್ಣ ಎಸ್. ಹೆಗಡೆ ಮೊದಲಾದವರು ಮಾತಾಡಿದರು. ಡಾ. ಅಡ್ಕೋಳಿಯವರ ಆಡಳಿತಾ ಸಾಮರ್ಥ್ಯ, ಕಾರ್ಯಕ್ರಮ ನಿರ್ವಹಣಾ ಚಾಕಚಕ್ಯತೆ, ಸ್ನೇಹಪರತೆ, ಸಾಮಾಜಿಕ ಕಳಕಳಿ, ಸಂಘಟನಾ ಕೌಶಲ್ಯ ಹಾಗೂ ಆಧ್ಯಾತ್ಮ ಗುಣಗಳನ್ನು ನೆನಪಿಸಿಕೊಂಡರು. ಅಡ್ಕೋಳಿಯವರು ದೆಹಲಿ ಕರ್ನಾಟಕ ಸಂಘ ಮತ್ತು ಗೋಕರ್ಣ ಮಂಡಳ ಸೇರಿದಂತೆ ಇತರ ಸಂಘ ಸಂಸ್ಥೆಗಳಿಗೆ ನೀಡಿರುವ ಕೊಡುಗೆಯನ್ನು ಕೊಂಡಾಡಿದರು. ಸಂಘದ ಕೋಶಾಧಿಕಾರಿ ಡಾ. ವೈ. ಅವನೀಂದ್ರನಾಥ್ ರಾವ್ ಅವರು ಕಾರ್ಯಕ್ರಮ ನಿರ್ವಹಿಸುತಾ ಡಾ. ಅಡ್ಕೋಳಿಯವರು ಸಾಂಸ್ಕೃತಿಕ ಕ್ಷೇತ್ರದೆಲ್ಲಿ ಮತ್ತು ಸಾಮಾಜಿಕ ಸೇವೆಯಲ್ಲಿ ಅತ್ಯಮೂಲ್ಯ ಕೊಡುಗೆಯನ್ನು ನೀಡಿದ್ದಾರೆ ಎಂದರು. ಡಾ. ಅಡ್ಕೋಳಿಯವರ ಪತ್ನಿ ಶ್ರೀಮತಿ ಶ್ಯಾಮಲಾ ಅವರೂ ಸಮಾರಂಭದಲ್ಲಿ ಉಪಸ್ಥಿತರಿದ್ದರು. ಇಬ್ಬರಿಗೂ ಸಂಘದ ವತಿಯಿಂದ ಸ್ಮರಣಿಕೆ ಮತ್ತು ಪುಷ್ಪಗುಚ್ಛಗಳನ್ನು ನೀಡಿ ಗೌರವಿಸಲಾಯಿತು. ಅ

***ಬಾಲಕೃಷ್ಣ ನಾಯ್ಕ್ ಡಿ.***

ಪ್ರಯೋಗಗಳನ್ನು ಮಾಡಿದ್ದಾರೆ. ಅವರು ನಾಟಕ ಸ್ಪರ್ಧೆಗಳ ತೀರ್ಪುಗಾರರಾಗಿ ರಂಗ ಪ್ರದರ್ಶನದ ತಾಂತ್ರಿಕ ಚೌಕಟ್ಟು ಮತ್ತು ಪ್ರದರ್ಶನಕಾರರ ಪ್ರತಿಭೆ ಮತ್ತು ಕೌಶಲ್ಯತೆಗೆಳನ್ನು ಪರಿಗಣಿಸಿ ನಿಷ್ಠುರ ಮತ್ತು ನಿಷ್ಪಕ್ಷಪಾತವಾದ ನಿರ್ಧಾರಗಳನ್ನು ತೆಗೆದುಕೊಳ್ಳುತ್ತಿದ್ದರು.

ದೆಹಲಿ ಕರ್ನಾಟಕ ಸಂಘದ ಆಡಳಿತದಲ್ಲಿ ಅವರು ಯಾವುದೇ ಹುದ್ದೆಗಳನ್ನು ಅಲಂಕರಿಸದಿದ್ದರೂ ಸಂಘದ ಆಡಳಿತ ಸಮಿತಿ ಚುನಾವಣೆಗಳ ರಿಟರ್ನಿಂಗ್ ಆಫೀಸರ್ ಆಗಿ ಅವರು ನಿಷ್ಪಕ್ಷಪಾತವಾದ ಕಾರ್ಯವನ್ನು ಎಲ್ಲರೂ ತಲೆದೂಗುವಂತೆ ಮಾಡಿ ದೆಹಲಿಯ ಕನ್ನಡಿಗರ ಗೌರವವನ್ನು ಹೆಚ್ಚಿಸಿದ್ದಾರೆ. ಅತ್ಯಂತ ಪ್ರಗತಿಪರ ಚಿಂತನೆಗಳ ಮೂಲಕ ಸಂಘದ ಬೆಳವಣಿಗೆಗೆ ಬೇಕಾದ ಸಲಹೆ ಸೂಚನೆಗಳನ್ನು ಸಂಘದ ಕಾರ್ಯಕಾರೀ ಸಮಿತಿಗಳಿಗೆ ಸದಾ ನೀಡುತ್ತಿರುತ್ತಾರೆ. ದೆಹಲಿ ಕರ್ನಾಟಕ ಸಂಘದೆಲ್ಲಿ ಹಲವಾರು ರಕ್ತದಾನ ಶಿಬಿರಗಳನ್ನು ನಡೆಸುವಲ್ಲಿಯೂ ಅವರು ಮಹತ್ತರವಾದ ಪಾತ್ರವನ್ನು ವಹಿಸಿದ್ದಾರೆ.



ಶಾಲೆಯೊಂದರಲ್ಲಿ ಸಂಸ್ಕೃತ ಅಧ್ಯಾಪಿಕೆಯಾಗಿದ್ದ ಅವರ ಪತ್ನಿ ಶ್ಯಾಮಲಾ ಅಡ್ಕೋಳಿ ಅವರೂ ಸಂಘದ ಕಾರ್ಯಕ್ರಮಗಳಲ್ಲಿ ಬಹಳ ಕ್ರಿಯಾಶೀಲತೆಯಿಂದ ಭಾಗವಹಿಸುತ್ತಿದ್ದರು. ಅವರ ಪುತ್ರಿ ಮಾಳವಿಕಾ ಉತ್ತಮ ಹಾಡುಗಾರ್ತಿಯಾಗಿದ್ದು ದೆಹಲೆ ಕರ್ನಾಟಕ ಸಂಘದ ಹಲವು ಕಾರ್ಯಕ್ರಮಗಳಲ್ಲಿ ತಮ್ಮ ಅದ್ಭುತ ಪ್ರತಿಭೆಯನ್ನು ಪ್ರದರ್ಶಿಸಿದ್ದಾರೆ. ಅವರ ಪುತ್ರ ವಿನಾಯಕ ಕಂಪ್ಯೂಟರ್ ವೃತ್ತಿಯಲ್ಲಿದ್ದು ಬೆಂಗಳೂರಿನಲ್ಲಿ ನೆಲೆಸಿದ್ದಾರೆ. ಸತ್ಯಸಾಯಿ ಸೇವಾ ಸಂಸ್ಥೆಯ ಮೂಲಕ ಆಧ್ಯಾತ್ಮಿಕ ಚಟುವಟಿಕೆ ಮತ್ತು ಸಮಾಜಸೇವೆಯಲ್ಲಿ ನಿರತರಾಗಿರುವ ಅಡ್ಕೋಳಿ ಅವರು ವೈದ್ಯಕೀಯ ಶಿಬಿರ ಮತ್ತು ಅಧ್ಯಯನ ಕೇಂದ್ರಗಳನ್ನೂ ನಡೆಸಿಕೊಂಡು ಬಂದಿದ್ದಾರೆ. ಅ

***ಬಾನಾಡಿ.***



# ಸಂಘದ ಸಾಧನೆಗಳಿಗೆ ಶ್ಲಾಘನೆ, ಅಭಿನಂದನೆ

ದೆಹಲಿ ಕರ್ನಾಟಕ ಸಂಘ ಸೇರಿದಂತೆ ಸಾಹಿತಿಗಳು, ಸಂಘ, ಸಂಸ್ಥೆಗಳು ಸರಕಾರಕ್ಕೆ ಮಾಡಿಕೊಟ್ಟ ಮನವರಿಕೆಯಿಂದಾಗಿ ದೇಶದ ಪ್ರತಿಷ್ಠಿತ ನವದೆಹಲಿಯ ಜವಾಹರಲಾಲ್ ನೆಹರು ವಿಶ್ವವಿದ್ಯಾಲಯದಲ್ಲಿ ಕರ್ನಾಟಕ ರಾಜ್ಯ ಸರಕಾರದ ವತಿಯಿಂದ ಕನ್ನಡ ಅಧ್ಯಯನ ಸ್ಥಾಪನೆ ಮಾಡಲು ಸಾಧ್ಯವಾಯಿತು ಎಂದು ಕನ್ನಡ ಮತ್ತು ಸಂಸ್ಕೃತಿ ಸಚಿವೆ ಉಮಾಶ್ರೀ ಅವರು ನುಡಿದರು.

ದೆಹಲಿಯಲ್ಲಿ ಕನ್ನಡ ಅಧ್ಯಯನ ಪೀಠ ಸ್ಥಾಪನೆ ಮತ್ತು ದೆಹಲಿ ಮೆಟ್ರೋ ನಿಲ್ದಾಣಕ್ಕೆ ಸರ್ ಎಂ. ವಿಶ್ವೇಶ್ವರಯ್ಯ ನಾಮಕರಣಗೊಂಡ ಪ್ರಯುಕ್ತ ಬೆಂಗಳೂರಿನ ಸಾಹಿತಿ ಮತ್ತು ಕಲಾವಿದರ ವೇದಿಕೆ ಹಾಗೂ ಕನ್ನಡ ಭಾರತಿ ಆಶ್ರಯದಲ್ಲಿ ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ ಜೂನ್ 21ರಂದು ಹಮ್ಮಿಕೊಂಡಿದ್ದ ಅಭಿನಂದನಾ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡುತ್ತಿದರು.

ಉಮಾಶ್ರೀ ಅವರು ದೆಹಲಿ ಕರ್ನಾಟಕ ಸಂಘದ ಸಾಧನೆಗಳನ್ನು ಶ್ಲಾಘಿಸಿ ದೆಹಲಿ ಅಥವಾ ಗುರ್‌ಗಾಂವ್‌ನಲ್ಲಿ ಅಗತ್ಯವಿರುವ ವಸತಿ ಸೌಕರ್ಯವನ್ನು ನಿರ್ಮಿಸಿಕೊಡುವುದರ ಬಗ್ಗೆ ಯೋಚಿಸಲಾಗುವುದು ಎಂದು ಭರವಸೆ ನೀಡಿದರು. ರಾಜ್ಯದ ರಂಗಮಂದಿರಗಳಲ್ಲಿ ಒಂದೊಂದು ರೀತಿಯ ಬಾಡಿಗೆ ದರವಿದೆ. ಸರಕಾರದ ಅಧೀನದ ರಂಗಮಂದಿರಗಳಲ್ಲಿ ಶೀಘ್ರವೇ ಏಕರೂಪದ ಬಾಡಿಗೆ ದರವನ್ನು ಜಾರಿಗೆ ತರಲಾಗುವುದು ಎಂದು ಕೂಡಾ ಉಮಾಶ್ರೀ ಅವರು ಹೇಳಿದರು.

ಕರ್ನಾಟಕ ಉಚ್ಚ ನ್ಯಾಯಾಲಯದ ನಿವೃತ್ತ ನ್ಯಾಯಮೂರ್ತಿ ಶ್ರೀ ಎ.ಜೆ. ಸದಾಶಿವ ಅವರು ರಾಜಧಾನಿಯಲ್ಲಿ ಕನ್ನಡವನ್ನು ಬಲಪಡಿಸುವುದರ ಬಗ್ಗೆ ಮಾತನಾಡಿದರು. ಅವರು ದೆಹಲಿ ಕರ್ನಾಟಕ ಸಂಘದ ಪದಾಧಿಕಾರಿಗಳನ್ನು ಮತ್ತು ಕಾರ್ಯಕಾರಿ ಸಮಿತಿ ಸದಸ್ಯರನ್ನು ಅಭಿನಂದಿಸಿದರು. ಕಾಂಗ್ರೆಸ್ ಮುಖಂಡ ಶ್ರೀ ವಿ.ಆರ್. ಸುದರ್ಶನ್ ಅವರು ಮಾತನಾಡಿ, 'ಕನ್ನಡಿಗರಿಗೆ ಐ.ಎ.ಎಸ್. ಮತ್ತು ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಉತ್ತಮ ತರಬೇತಿ ನೀಡುವುದಕ್ಕಾಗಿ, ರಾಜ್ಯ ಸರ್ಕಾರ ರಾಜಧಾನಿ ನವದೆಹಲಿಯಲ್ಲಿ ಸುಸಜ್ಜಿತ ತರಬೇತಿ ಕೇಂದ್ರವನ್ನು ತೆರೆಯಬೇಕು' ಎಂದು ಸಲಹೆ ನೀಡಿದರು.

ಈ ಸಂದರ್ಭದಲ್ಲಿ ಅಭಿನಂದನೆ ಸ್ವೀಕರಿಸಿ ಮಾತನಾಡಿದ ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷ ಶ್ರೀ ವಸಂತ ಶೆಟ್ಟಿ ಬೆಳ್ಳಾರೆಯವರು ದೆಹಲಿಯ ಗುರ್‌ಗಾಂವ್‌ನಲ್ಲಿ ಕನ್ನಡ ಸಾಂಸ್ಕೃತಿಕ ಕೇಂದ್ರ ಸ್ಥಾಪನೆ ಹಾಗೂ ವಸತಿಗೃಹದ ನಿರ್ಮಾಣದ ಯೋಜನೆಯೊಂದನ್ನು ದೆಹಲಿ ಕರ್ನಾಟಕ ಸಂಘವು ಕೈಗೆತ್ತಿಕೊಂಡಿದೆ ಎಂದರು. ಇದನ್ನು ಸಾಕಾರಗೊಳಿಸಲು ಕರ್ನಾಟಕ ಸರ್ಕಾರದ ನೆರವನ್ನು ನೀಡಬೇಕೆಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವೆ ಶ್ರೀಮತಿ ಉಮಾಶ್ರೀ ಅವರಲ್ಲಿ ವಿನಂತಿಸಿಕೊಂಡರು. ಈ ವಸತಿ ಗೃಹವು ನಿರ್ಮಾಣವಾದರೆ ದೆಹಲಿಗೆ ಬರುವ ಕನ್ನಡದ ಐ.ಎ.ಎಸ್. ಆಕಾಂಕ್ಷಿಗಳು ಮತ್ತು ಕಲಾವಿದರಿಗೆ ಸಹಾಯವಾಗಬಲ್ಲದು ಎಂದರು. ಮಾತ್ರವಲ್ಲದೆ ಕನ್ನಡದ ಹೆಣ್ಣು ಮಕ್ಕಳು ಹೆಚ್ಚು ಸಂಖ್ಯೆಯಲ್ಲಿ ಪಾಲ್ಗೊಳ್ಳುವ ಗಟ್ಟಿ ಭರವಸೆ ದೆಹಲಿ ಕರ್ನಾಟಕ ಸಂಘದ್ದಾಗಿದೆ ಎಂದರು.

ಕನ್ನಡದ ಸಾಹಿತ್ಯ, ನಾಟಕ ಕೃತಿಗಳು ಹಿಂದಿಗೆ, ಇಂಗ್ಲೀಷ್ ಮತ್ತು ಭಾರತದ ಇತರ ಭಾಷೆಗಳಿಗೆ ಹೆಚ್ಚು ಅನುವಾದಗೊಳ್ಳಬೇಕು ಮತ್ತು ಅದರ ವಿಮರ್ಶೆಗಳು ರಾಷ್ಟ್ರದ ರಾಜಧಾನಿಯಲ್ಲಿ ನಡೆಯುತ್ತಿರಬೇಕು. ಕರ್ನಾಟಕದ ಜಾನಪದ ಕಲೆಗಳ ಪ್ರದರ್ಶನ ಕೂಡಾ ನಿರಂತರವಾಗಿ

## ಸೇವಂತಿ ಪ್ರಸಂಗ- ಅದ್ಭುತ ನಿರ್ದೇಶನ ಮತ್ತು ಅಭಿನಯ

ಬೆಂಗಳೂರಿನ ರವೀಂದ್ರ ಕಲಾ ಕ್ಷೇತ್ರದಲ್ಲಿ ಜೂನ್ 20ರಂದು ದೆಹಲಿ ಕರ್ನಾಟಕ ಸಂಘದ ಸದಸ್ಯರು ಪ್ರಸ್ತುತ ಪಡಿಸಿದ ಸೇವಂತಿ ಪ್ರಸಂಗ ನಾಟಕವನ್ನು ಮೈಸೂರು ರಂಗಾಯಣದ ಮಂಜುನಾಥ್ ಬೆಳಕೆರೆ ಅವರು ಅದ್ಭುತವಾಗಿ ನಿರ್ದೇಶಿಸಿದ್ದಾರೆ. ಬರೆ ಹಾಸ್ಯಕ್ಕೆ ಪ್ರಾಮುಖ್ಯ ಇರುವ ಈಗಿನ ಕಾಲದಲ್ಲಿ ಒಂದೂ ಮುಕ್ಕಾಲು ಗಂಟೆ ಅಷ್ಟು ಜನರು ಅಲುಗಾಡದೆ ನೋಡಿದ ಸೇವಂತಿ ಪ್ರಸಂಗ ನಾಟಕ ಈಗಿನ ಸಮಾಜದಲ್ಲಿ ಹೆಣ್ಣಿನ ಬಗ್ಗೆ ಶೋಷಣೆಗೈಯುವ ವ್ಯಕ್ತಿಗಳಿಗೆ ಉಪದೇಶವನ್ನು ನೀಡುತ್ತದೆ.

ಈ ನಾಟಕದಲ್ಲಿ ಅಭಿನಯಿಸಿರುವ ಎಲ್ಲಾ ಪಾತ್ರಧಾರಿಗಳೂ ಅದ್ಭುತ ಕಲಾವಿದರು. ಒಬ್ಬರಿಗಿಂತ ಒಬ್ಬರ ಅಭಿನಯ ಅದ್ಭುತವಾಗಿ ಬಂದಿದೆ. ಶಿಲ್ಪ ಹರಿಪ್ರಿಯಾ ಅವರ ತಪ್ಪ ಅನಿಸ್ತಿನಿ ಅನ್ನೋ ಮಾತು ಜನರ ಮನಸ್ಸನ್ನು ತುಂಬಾ ಹತ್ತಿರ ಎಳೆಯುತ್ತದೆ. ಹಾಗೆಯೇ ವಿದ್ಯಾ ಭಟ್ ಅವರ ಪಾತ್ರದ ಬಗ್ಗೆ ಹೇಳುವುದಾದರೆ ಸೌಂದರ್ಯ ಸ್ಪರ್ಧೆಯಲ್ಲಿ ಮಿಸ್. ಸೇವಂತಿಯಾಗಿ ಅವಳು ಬಂದಾಗ ಜನಗಳು ಅವಳಿಗೆ ಇಷ್ಟವಿಲ್ಲದ ಪ್ರಶ್ನೆಗಳನ್ನು ಕೇಳಿದಾಗ ಅವಳ ಮನಸ್ಸಿಗೆ ತುಂಬಾ ಮುಟ್ಟುತ್ತದೆ.

ಶಿಲ್ಪ ಹರಿಪ್ರಿಯಾ ಅವರು ಹಾಡಿದ 'ಸಾಕು ನನಗೆ ಪುಟ್ಟದೊಂದು ಮನೆ' ಹಾಡು ಮನಸ್ಸಿಗೆ ತುಂಬಾ



ನಡೆಸುವ ಪ್ರಯತ್ನ ಆಗಬೇಕು ಹಾಗೂ ಈ ಮೂಲಕ ಕರ್ನಾಟಕವನ್ನು ರಾಷ್ಟ್ರಕ್ಕೆ ಪರಿಚಯಿಸುವ ಕೆಲಸವಾಗುತ್ತದೆ ಎಂದು ವಸಂತ ಶೆಟ್ಟಿ ಬೆಳ್ಳಾರೆಯವರು ಹೇಳಿದರು. ಹೀಗೆ ಕನ್ನಡ ಭಾಷೆ ಮತ್ತು ಸಂಸ್ಕೃತಿಯನ್ನು ಭಾರತೀಯ ಭಾಷೆಗಳೊಡನೆ ಮತ್ತು ಅಂತಾರಾಷ್ಟ್ರೀಯ ಸಂಸ್ಕೃತಿಗಳೊಡನೆ ಮುಖಾಮುಖಿಯಾಗಿಸಿ, ಕನ್ನಡದ ಅನನ್ಯತೆಯನ್ನು ಜಗತ್ತಿಗೆ ತಿಳಿಸಿ ಹೇಳುವ ಕೆಲಸವನ್ನು ಸಂಘವು ಪ್ರಾಮಾಣಿಕವಾಗಿ ಮಾಡುತ್ತಿದೆ ಎಂದರು.

ಈ ಸಂದರ್ಭದಲ್ಲಿ ಹಾಜರಿದ್ದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕರಾದ ಶ್ರೀ ದಯಾನಂದ್, ಖ್ಯಾತ ಚಲನಚಿತ್ರ ನಿರ್ದೇಶಕ ಟಿ.ಎಸ್. ನಾಗಾಭರಣ ಅವರು ಮಾತಾಡಿ ದೆಹಲಿ ಕರ್ನಾಟಕ ಸಂಘದ ಚಟುವಟಿಕೆಗಳನ್ನು ಶ್ಲಾಘಿಸಿದರು. ನ್ಯಾಯಮೂರ್ತಿ ಎ.ಜೆ. ಸದಾಶಿವ ಅವರು ರಾಜಧಾನಿಯಲ್ಲಿ ಕನ್ನಡವನ್ನು ಬಲಪಡಿಸುವುದರ ಬಗ್ಗೆ ಮಾತನಾಡಿದರು. ಶ್ರೀನಿವಾಸ ಜಿ. ಕಪ್ಪಣ್ಣ, ಉಷಾ ಭರತಾದ್ರಿ ಕಾರ್ಯಕ್ರಮ ನಿರ್ವಹಿಸಿದರು. ಇದೇ ಸಂದರ್ಭದಲ್ಲಿ ದೆಹಲಿ ಕರ್ನಾಟಕ ಸಂಘದ ಕಲಾವಿದರು 'ಸೇವಂತಿ ಪ್ರಸಂಗ' ನಾಟಕವನ್ನು ಪ್ರದರ್ಶಿಸಿದರು. ಅ

***ಟಿ.ಎಸ್. ರಮೇಶ್***

ಮುದ ನೀಡುತ್ತದೆ. ಶಿಲ್ಪ ಹರಿಪ್ರಿಯ ಹಾಡುವಾಗ ಒಳಗಿನಿಂದ ವೇದಿಕೆಗೆ ಬಿಸಾಡಿದ ಬಲೂನ್‌ಗಳ ದೃಶ್ಯ ತುಂಬಾ ಅದ್ಭುತವಾಗಿದ್ದು ಜನರ ಮೈಮನ ರೋಮಾಂಚನಗೊಳ್ಳುವಂತೆ ಇತ್ತು. ಇದೆಲ್ಲವನ್ನು ಸಾಧನೆ ಮಾಡಿ ತೋರಿಸಿದ ರಚನೆಗಾರರಿಗೂ, ನಿರ್ದೇಶಕರಿಗೆ ಹಾಗೂ ಸಂಘದ ಅಧ್ಯಕ್ಷರಾದ ವಸಂತ ಶೆಟ್ಟಿ ಬೆಳ್ಳಾರೆ ಮತ್ತು ಸರ್ವ ಸದಸ್ಯರಿಗೂ ನಮ್ಮ ನಂದಿಕೇಶ್ವರ ನಾಟಕ ಸಂಘದವರಿಂದ ಹೃತ್ಪೂರ್ವಕ ಅಭಿನಂದನೆಗಳು. ಅ

***ಶೋಭಾ ರೈ, ಮಂಗಳೂರು***

# ಕೃತಜ್ಞತೆ ಮತ್ತು ಅಭಿನಂದನೆ




ಹೌದು! ಮೊಟ್ಟ ಮೊದಲು ನನ್ನ ಪತ್ರದ ಮುಖ್ಯ ವಿಷಯ. ನನಗೆ ಆನಂದ, ಸಂತಸ, ಸವಿನೆನಪು, ಸಡಗರ, ಸಂಭ್ರಮದ ಕ್ಷಣಗಳಾಗಿವೆ. ಟಿ.ಎಸ್. ರಮೇಶ್ ಹಾಗೂ ಎಸ್.ಎನ್. ರಾಜು ಅವರು ದೂರವಾಣಿ ಮೂಲಕ ದೆಹಲಿ ಕರ್ನಾಟಕ ಸಂಘದ ನಾಟಕ ಬೆಂಗಳೂರಿನಲ್ಲಿದೆ. ರವೀಂದ್ರ ಕಲಾ ಕ್ಷೇತ್ರಕ್ಕೆ ಬನ್ನಿ ಎಂದು ತಿಳಿಸಿದರು.

ಅಂದು 21 ಜೂನ್ 2015. ಅದು ಮಹತ್ವದ ದಿನ. ಅಂತರರಾಷ್ಟ್ರೀಯ ಯೋಗ ದಿನ, ಅಪ್ಪಂದಿರ ದಿನ, ವಿಶ್ವ ಸಂಗೀತ ದಿನ, ಅಷ್ಟು ಮಾತ್ರವಲ್ಲ ಖಗೋಳ ಶಾಸ್ತ್ರದ ಪ್ರಕಾರ ಅತಿ ದೀರ್ಘ ದಿನ ಕೂಡಾ.

ಸಂಘದ ಅಧ್ಯಕ್ಷ ವಸಂತ ಶೆಟ್ಟಿ ಬೆಳ್ಳಾರೆ ಬರ್ತಾರೆ. ಹೌದು! ಅವರನ್ನು ನೋಡದೇ ಎರಡು-ಮೂರು ದಶಕಗಳೇ ಆಗಿವೆ. ಅಲ್ಲಿ ಬಂದಾಗ ಅದೆಷ್ಟು ಖುಷಿಯಾಯ್ತು. ಅರರೆ ಎಂ.ವಿ. ನಾರಾಯಣ ರಾವ್! ಕನ್ನಡ ಭಾರತಿಯ ಸಂಸ್ಥಾಪಕರಲ್ಲಿ ಒಬ್ಬರು. ಸಜ್ಜನ 'ಮೋಟೇರಾಮ ಸತ್ಯಾಗ್ರಹ' ನಾಟಕದಲ್ಲಿ ನನಗೂ ಪಾತ್ರ ನೀಡಿದವರು.

'ಸೇವಂತಿ ಪ್ರಸಂಗ' ನಾಟಕದ ನಿರ್ದೇಶಕ ಮಂಜುನಾಥ ಬೆಳಕೆರೆ ಹೇಳಿದ ಬೀಜ ಮಾತು ಮರೆಯಲು ಸಾಧ್ಯವಿಲ್ಲ. ನಾಟಕ ಮನಸ್ಸುಗಳನ್ನು ಕಟ್ಟಬೇಕು ಎಂಬುದು. ಇಲ್ಲಿಂದ ಎರಡೂವರೆ ಸಾವಿರ ಕಿಲೋಮೀಟರ್ ದೂರದಿಂದ ನನ್ನವರು, ನನ್ನ ದೆಹಲಿಯ ಕನ್ನಡ ಬಂಧುಗಳು ಬಂದಿದ್ದಾರೆ. ನನಗಾದ ಆನಂದ ಅಷ್ಟಿಷ್ಟಲ್ಲ. ಸಂತಸ ಗರಿಗೆದರಿತ್ತು. ಹಳೆಯ ಸವಿನೆನಪುಗಳು ಧಾವಿಸಿ ಬಂದವು.

ಮನಸಿಗೆ ಸಡಗರ. ರವೀಂದ್ರ ಕಲಾಕ್ಷೇತ್ರದಲ್ಲಿ ಸಂಜೆಯಿಂದ ರಾತ್ರಿ ನಾಟಕ ಮುಗಿಯುವವರೆಗೂ ಇದ್ದೆ. ನನ್ನ ಸುತ್ತಲು ನನ್ನ ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರು, ಸದಸ್ಯರು. ಭಾವುಕತೆ ಎಂದು ನಿಮಗನಿಸಬಹುದು. ಅನಿಸಲಿ, ಪರವಾಗಿಲ್ಲ. ನನಗೆ ತುಂಬಾ ಖುಷಿ ಆಯಿತು.

ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರಾದಿಯಾಗಿ ಆ ಪುಟ್ಟ ಬಾಲಕನವರೆಗೆ ಎಲ್ಲರಿಗೂ ನಾನು ಆಭಾರಿ. 1988 ಡಿಸೆಂಬರ್‌ನಿಂದ 2000 ಡಿಸೆಂಬರ್‌ವರೆಗೆ ನಾನು ದೆಹಲಿಯಲ್ಲಿದ್ದೆ. ಅದೋ ... ಅಹಲ್ಯಾಚಿಂತಾಮಣಿ ಬಂದಿದ್ದಾರೆ. ಅವರನ್ನು ಕಂಡು ನಮಸ್ಕಾರ ಹೇಳಿದೆ. ಈ ನನ್ನ ಸಂತಸಕ್ಕೆ ಕಾರಣರಾದವರು ರಮೇಶ್ ಹಾಗೂ ರಾಜು. ಅವರು ತಿಳಿಸದೇ ಇದ್ದರೆ ನನ್ನದೇ ಸಂಗೀತ ಕಾರ್ಯಕ್ರಮಗಳಲ್ಲಿ ವ್ಯಸ್ತನಾಗಿ ಅವಕಾಶವಂಚಿತನಾಗುತ್ತಿದ್ದೆ. ದೆಹಲಿ ಕರ್ನಾಟಕ ಸಂಘ ನನಗೆ ಅಲ್ಲಿದ್ದಾಗ ಅಪಾರ ಪ್ರೋತ್ಸಾಹ ನೀಡಿದೆ. ಇದೊಂದು ರೀತಿಯ ಕೃತಜ್ಞತಾ ಪತ್ರವೂ ಹೌದು. ವಂದನೆಗಳು.

ಇನ್ನು ಸೇವಂತಿ ಪ್ರಸಂಗ ನಾಟಕದ ಬಗ್ಗೆ. ಒಟ್ಟಾರೆ ದೃಷ್ಟಿಯಲ್ಲಿ ನಿರ್ದೇಶಕರಾದಿಯಾಗಿ ಎಲ್ಲರೂ, ಎಲ್ಲರೂ ಅಭಿನಂದನಾರ್ಹರು. ಎರಡು ಮಾತಿಲ್ಲ. ಎಲ್ಲರದೂ ಅತ್ಯಂತ ಸಹಜ ಅಭಿನಯ. ಮುಖ್ಯವಾಗಿ ತಮ್ಮ ಪಾತ್ರಾಭಿನಯ ಮರೆಯದಂತೆ ಮಾಡಿದವರು-ಶಿಲ್ಪ ಹರಿಪ್ರಿಯ, ವಿದ್ಯಾ ಭಟ್ ಸಹ ಅಷ್ಟೆ. ಕ್ರೂರ ವ್ಯವಸ್ಥೆಗೆ ಸಿಕ್ಕು ಹತಾಶರಾಗಿ ಅತ್ತ ರೀತಿಯ ಅಭಿನಯ ಪ್ರಶಂಸಾರ್ಹ.

ಶಿಲ್ಪಹರಿಪ್ರಿಯ, ಪಾತ್ರಕ್ಕೆ ತಕ್ಕ ದೇಹ, ಅತ್ಯಂತ ಸಹಜಾಭಿನಯ. ಮೇಡಂ, ನಿಮಗೆ ಈ ಮಧ್ವರಾಜನ ಪ್ರತ್ಯೇಕ ಅಭಿನಂದನೆ. ಈಗ ನನಗೆ 67ವರ್ಷ. 12ನೇ ವರ್ಷದಿಂದ ಇದುವರೆಗೆ ಸುಮಾರು 50 ರಂಗನಾಟಕಗಳಲ್ಲಿ, 50-60 ರೇಡಿಯೋ ನಾಟಕಗಳಲ್ಲಿ ಅಭಿನಯಿಸಿದ್ದೇನೆ. ದೆಹಲಿ ಕರ್ನಾಟಕ ಸಂಘದ ನಾಟಕ ಸ್ಪರ್ಧೆಯಲ್ಲಿ ನಿರ್ದೇಶನಕ್ಕೆ 'ವಿಶೇಷ ಬಹುಮಾನ' ಪಡೆದ ಹಿನ್ನೆಲೆ ಇದೆ. ಹೀಗಾಗಿ ನಾಟಕ ನನಗೆ ಅತ್ಯಂತ ಖುಷಿ ಕೊಟ್ಟಿತು. ಪರಿಶೀಲಕನಾಗಿ, ಸಹೃದಯ ಪ್ರೇಕ್ಷಕನಾಗಿ ನಾಟಕ ನೋಡಿದೆ. ಕುಡುಕರ ತಂಡ ನಮ್ಮನ್ನು ಹುಚ್ಚೆದ್ದು ಕುಣಿಯುವಂತೆ ಮಾಡಿತ್ತು. ಮನಸ್ಸಿನಲ್ಲೇ ಕುಣಿದೆ ಅಷ್ಟೆ. ಏಕೆಂದರೆ ಆಗ ನಾನು ಕೇವಲ ಪ್ರೇಕ್ಷಕ, ಅದು ರವೀಂದ್ರ ಕಲಾಕ್ಷೇತ್ರ.

ಭಾರ್ಗವ ಶಾಸ್ತ್ರಿ (ನಾರಾಯಣ) ಅಭಿನಯ ಸಮರ್ಪಕ. ಆದರೆ, ಕಿರಿಚುವುದು ಸ್ವಲ್ಪ ಕಡಿಮೆಯಾದರೆ ಚೆನ್ನ ಎಂದು ನನಗನ್ನಿಸಿದ್ದು. ಕ್ಷಮೆ ಇರಲಿ. ಇದ್ದಕ್ಕಿದ್ದಂತೆ ಬಲೂನುಗಳು ರಂಗ ತುಂಬಿದ್ದು, ನನಗೆ ವಿಸ್ಮಯ. ಅದೇ ಸೇವಂತಿಯ ಕನಸಿನ ದೃಶ್ಯ ಅದ್ಭುತ. ಸಂತಸ. ನಿರ್ದೇಶಕರಿಗೆ ಪ್ರತ್ಯೇಕ ಶಾಭಾಶ್. ಪ್ರತ್ಯೇಕ ಅಭಿವಂದನೆ, ಅಭಿನಂದನೆ.

ಯಾರಿಗೆ ಯಾರೂ ಕಡಿಮೆಯಿಲ್ಲ. ಬರೆಯುತ್ತಾ ಹೋದಲ್ಲಿ ಇನ್ನೂ ಎರಡು ಪುಟಗಳಾಗುತ್ತದೆ. ರಾತ್ರಿ 10 ಆಗಿತ್ತು ಮನೆ ತಲುಪುವುದು ಕಷ್ಟ ಸಾಧ್ಯ. ಸರಿ ರಾತ್ರಿ ಆಗುತ್ತದೆ. ಹೀಗಾಗಿ ಬರುವಾಗ ಮತ್ತೊಮ್ಮೆ ಎಲ್ಲರನ್ನೂ ಅಭಿನಂದಿಸಲಾಗಲಿಲ್ಲ. ನಾ ದೆಹಲಿಯಲ್ಲಿದ್ದಿದ್ದರೆ ನನಗೂ ಒಂದು ಪಾತ್ರ ಸಿಕ್ಕಿತ್ತೋ ಏನೋಅಂತ ಅನಿಸಿದ್ದು ನಿಜ. ಹಾಡುಗಳು ಕರ್ಣಮಧುರ, ಒಟ್ಟಿನಲ್ಲಿ ಎಲ್ಲರು ಅಭಿನಂದನಾರ್ಹರು. ಅ

***ಕೆ.ಎಂ. ಮಧ್ವರಾಯ, ಬೆಂಗಳೂರು***

# ತಾಯ್ನಾಡಿನಲ್ಲಿ ಜಯಭೇರಿ ಗಳಿಸಿದ ಸಂಘದ ಕಲಾವಿದರ ನಾಟಕ

ದೆಹಲಿ ಕರ್ನಾಟಕ ಸಂಘವು ತನ್ನ ಹೊಸ ಸಾಂಸ್ಕೃತಿಕ ಸಮುಚ್ಚಯದ ದಶಮಾನೋತ್ಸವ ಆಚರಣೆಯ ಸಂದರ್ಭದಲ್ಲಿ, ಬೆಳ್ಳಿ ಹಬ್ಬದ ಸಂಭ್ರಮಾಚರಣೆಯಲ್ಲಿರುವ ಮೈಸೂರಿನ ರಂಗಾಯಣದ ಸಹಯೋಗದಲ್ಲಿ ಸಂಘದ ಸದಸ್ಯರಿಂದ ಡಾ. ಜಯಂತ ಕಾಯ್ಕಿಣಿಯವರ ನಾಟಕ ಸೇವಂತಿ ಪ್ರಸಂಗದ ಎರಡು ಪ್ರದರ್ಶನಗಳನ್ನು ಮೈಸೂರು ರಂಗಾಯಣದ ಭೂಮಿಗೀತ ರಂಗಮಂದಿರದಲ್ಲಿ ಮತ್ತು ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ ಇದೇ ಜೂನ್ 20 ಮತ್ತು 21ರಂದು ನಡೆಸಿತು.

ಸಂಘದ ಕಲಾವಿದರಿಗಾಗಿ ರಂಗಾಯಣದ ಮಂಜುನಾಥ ಬೆಳಕೆರೆ ಅವರು ದೆಹಲಿಗೆ ಬಂದು ಈ ನಾಟಕವನ್ನು ನಿರ್ದೇಶಿಸಿದ್ದರು. ರಂಗಾಯಣ ಪ್ರಾರಂಭವಾದಾಗಿಂದ ನಟನಾಗಿ ಹಾಗೂ ರಂಗಭೂಮಿಯ ವಿವಿಧ ವಿಭಾಗಗಳಲ್ಲಿ ವಿಶೇಷ ಪರಿಣಿತಿ ಹೊಂದಿರುವ ಬೆಳಕೆರೆ ಅವರು ಸುಮಾರು 40ಕ್ಕೂ ಹೆಚ್ಚು ನಾಟಕಗಳನ್ನು ನಿರ್ದೇಶಿಸಿದ್ದಾರೆ.

ಕಳೆದ ಶತಮಾನದ ಅರವತ್ತು ಮತ್ತು ಎಪ್ಪತ್ತರ ದಶಕದಲ್ಲಿ ದೆಹಲಿಯಲ್ಲಿ ಕನ್ನಡ ರಂಗಭೂಮಿಗೆ ವಿಶೇಷ ಕೊಡುಗೆ ನೀಡಿದ ಬಿ.ವಿ. ಕಾರಂತ ಅವರಿಂದ ಸ್ಥಾಪಿಸಲಾದ ಕನ್ನಡ ಭಾರತಿಯನ್ನು ನೆನಪಿಸಿಕೊಳ್ಳುವ ಪ್ರಯತ್ನದ ಫಲ ರಂಗಭೂಮಿಗೆ ಕೊಡುಗೆ ನೀಡಿದವರನ್ನು ಗುರುತಿಸಿ ಗೌರವಿಸುವ ಕಾರ್ಯವನ್ನು ಸಂಘವು ಕೈಗೆತ್ತಿಕೊಂಡಿದೆ. ಆ ನಿಟ್ಟಿನಲ್ಲಿ ದೆಹಲಿ ಕರ್ನಾಟಕ ಸಂಘವು 'ಕನ್ನಡ ಭಾರತಿ ಪ್ರಶಸ್ತಿ'ಯನ್ನು ಸ್ಥಾಪಿಸಿ, ಪ್ರಯೋಗಶೀಲತೆಯಿಂದ ಕನ್ನಡ ರಂಗಭೂಮಿಗೆ ದೆಹಲಿಯಲ್ಲಿ ಹೊಸ ಆಯಾಮವನ್ನು ನೀಡಿದ ಕನ್ನಡ ಭಾರತಿಯ ಎಂ.ವಿ. ನಾರಾಯಣ ರಾವ್ ಅವರಿಗೆ ಮೊದಲ ಪ್ರಶಸ್ತಿಯನ್ನು ನೀಡಿ ಗೌರವಿಸಿದೆ. ಈ ಸಂದರ್ಭದಲ್ಲಿ ದೆಹಲಿಯಲ್ಲಿ ಎರಡು ವಾರಕ್ಕಿಂತಲೂ ಹೆಚ್ಚು ದಿನಗಳ ತಾಲೀಮಿನಿಂದ ತಯಾರಾದ ಸೇವಂತಿ ಪ್ರಸಂಗ ನಾಟಕದ ಮೊದಲ ಪ್ರದರ್ಶನವು ಸಂಘದ ಸಭಾಂಗಣದಲ್ಲಿ ಇದೇ ಎಪ್ರಿಲ್ 19ರಂದು ನಡೆದಿತ್ತು.

ಜಗತ್ತಿನ ಪ್ರಸಿದ್ಧ ನಾಟಕಕಾರ ಬರ್ನಾರ್ಡ್ ಷಾನ ಪಿಗ್ಮೇಲಿಯನ್ ನಾಟಕ ಶ್ರೇಷ್ಠ ನಾಟಕಗಳಲ್ಲೊಂದಾಗಿದ್ದು ಹಲವು ಭಾಷೆಗೆ ಅನುವಾದಗೊಂಡಿದೆ. ಈ ನಾಟಕವನ್ನು ಲರ್ನರ್ ಅವರು ಮೈ ಫೇರ್ ಲೇಡಿ ಎಂಬ ಹೆಸರಿನಲ್ಲಿ ಸಿನಿಮಾವಾಗಿ ನಿರ್ದೇಶಿಸಿದ್ದರು. ಈ ಚಿತ್ರದ ಮೂಲ ಆಶಯವನ್ನು ತಮ್ಮ ಕತೆಯಲ್ಲಿಟ್ಟು ಡಾ. ಜಯಂತ್ ಕಾಯ್ಕಿಣಿಯವರು ಸೇವಂತಿ ಪ್ರಸಂಗ ನಾಟಕವನ್ನು ಕನ್ನಡದಲ್ಲಿ ರಚಿಸಿದ್ದಾರೆ.

ರಂಗಾಯಣವು ಮೈಸೂರಿನಲ್ಲಿ ನಡೆಸುತ್ತಿರುವ ರಾಜ್ಯ ಮಟ್ಟದ ಹವ್ಯಾಸಿ ನಾಟಕೋತ್ಸವದಲ್ಲಿ ಜೂನ್ 20 ರಂದು ದೆಹಲಿ ಕರ್ನಾಟಕ ಸಂಘವು ಸೇವಂತಿ ಪ್ರಸಂಗ ನಾಟಕವನ್ನು ಮೈಸೂರಿನ ಪ್ರೇಕ್ಷಕರಿಗಾಗಿ ಪ್ರದರ್ಶಿಸಿತು. ರಂಗಾಯಣವು ನುರಿತ ಅನುಭವಿ ಕಲಾವಿದರು, ತಂತ್ರಜ್ಞರು, ನಿರ್ದೇಶನದಲ್ಲಿ ಪರಿಣಿತಿ ಹೊಂದಿರುವ ಸಮರ್ಥ ವೃತ್ತಿನಿರತ ತಂಡ ಮತ್ತು ಪ್ರಯೋಗಾತ್ಮಕ ರಂಗಕ್ರಿಯೆಗಳನ್ನು ವಿಸ್ತರಿಸುವ ದೃಷ್ಟಿಯಿಂದ ರಾಜ್ಯ ಹಾಗೂ ರಾಷ್ಟ್ರ ಮಟ್ಟದಲ್ಲಿ ಪ್ರದರ್ಶನ, ರಂಗೋತ್ಸವಗಳು, ರಂಗ ತರಬೇತಿ ಶಿಬಿರಗಳನ್ನು, ನಾಟಕ ನಿರ್ದೇಶನಗಳನ್ನು ನಿರ್ವಹಿಸುವತ್ತ, ರಂಗಭೂಮಿ ಚಟುವಟಿಕೆಗಳನ್ನು ವಿಕೇಂದ್ರಿಕರಣಗೊಳಿಸುವ ನಿಟ್ಟಿನಲ್ಲಿ ಕಾರ್ಯೋನ್ಮುಖವಾಗಿದೆ. ಈ ದಿಸೆಯಲ್ಲಿ ರಂಗ ಚಟುವಟಿಕೆಗಳನ್ನು ವಿಸ್ತರಿಸುತ್ತ ಹೊರನಾಡು ಕನ್ನಡಿಗರೊಂದಿಗೆ ಕನ್ನಡ ಸಾಂಸ್ಕೃತಿಕ ಅನುಸಂಧಾನವನ್ನು ನಡೆಸಲು ಮುಂದಾಗಿದೆ. ದೆಹಲಿ ಕರ್ನಾಟಕ ಸಂಘದೊಂದಿಗೆ ರಂಗಾಯಣದ ಸಂಬಂಧ ಬಿಡಿಸಲಾರದ್ದು. ರಂಗಾಯಣದ ಆರಂಭ ಹಾಗೂ ಬೆಳವಣಿಗೆಯ ಹಂತದಲ್ಲಿ ಸಂಘವು ಹಿರಿದಾದ ಪಾತ್ರ ವಹಿಸಿದೆ.

ದೆಹಲಿಯ ಕನ್ನಡಿಗರು ಹೊರನಾಡಿನಲ್ಲಿ ಕನ್ನಡದ ರಾಯಭಾರಿಗಳಾಗಿ ಕನ್ನಡ ನಾಡು, ನುಡಿ, ಸಂಸ್ಕೃತಿಗಾಗಿ ಕೈಗೊಂಡ ಕಾರ್ಯಗಳನ್ನು ಮೆಚ್ಚಿ ಬೆಂಗಳೂರಿನ ಸಾಹಿತಿ ಮತ್ತು ಕಲಾವಿದರ ವೇದಿಕೆ ಮತ್ತು ನವದೆಹಲಿಯ ಕನ್ನಡ ಭಾರತಿಯಿಂದ ಅಭಿನಂದನೆಗೊಂಡ ಸಂದರ್ಭದಲ್ಲಿ ಸಂಘದ ಕಲಾವಿದರು ಸೇವಂತಿ ಪ್ರಸಂಗ ನಾಟಕವನ್ನು ಬೆಂಗಳೂರಿನಲ್ಲಿ ಜೂನ್ 21 ರಂದು ಪ್ರದರ್ಶಿಸಿದರು.

ಮಂಜುನಾಥ್ ಬೆಳಕೆರೆ ನಿರ್ದೇಶನದ ಈ ನಾಟಕವನ್ನು ರಂಗದ ಮೇಲೆ ಅಭಿನಯಿಸಿದ ದೆಹಲಿ ಕರ್ನಾಟಕ ಸಂಘದ ಕಲಾವಿದರು: ಶಿಲ್ಪ ಹರಿಪ್ರಿಯ, ವಿದ್ಯಾ ಭಟ್, ನಾರಾಯಣ ಬಿ., ಟಿ. ಎಂ. ಮೈಲಾರಪ್ಪ, ಎ. ಟಿ. ಶ್ರೀನಿವಾಸ, ಆರ್. ಎಸ್. ಶ್ಯಾಮಸುಂದರ, ಶಿವಪ್ಪ ಎಂ., ವಿನೋದ ಕುಮಾರ, ಆಶಾಲತಾ ಮಹದೇವ್, ಆಶಾ ಶ್ಯಾಮಸುಂದರ, ಪ್ರಕಾಶ್ ಶೆಟ್ಟಿ ಉಳೆಪಾಡಿ, ಶೈಲ ಕುಮಾರ್, ದೀಪಾ ಶಿವಪ್ಪ, ಮಂಜುಳಾ ನಾಗರಾಜ, ಶಿವಾನಂದ ಇಂಗಳೇಶ್ವರ, ಮಹದೇವ್, ಹರಿ ಪ್ರಿಯ ಎಸ್., ಸಂಜನ ಎಂ., ಸುಧೀರ್ ಫಡ್ನೀಸ್, ಕೆ. ಆರ್. ಸಾನ್ವಿ ಕುಮಾರ್, ಕೆ. ಆರ್. ವಿಸ್ಮಯ ಕುಮಾರ್, ಮತ್ತು ಅಭಿಷೇಕ್ ಎಸ್.

ತಾಂತ್ರಿಕ ವರ್ಗದಲ್ಲಿ ಸಂಗೀತ–ಭೀಮಸೇನ್ ಭಜಂತ್ರಿ, ಸಂಗೀತ ಸಾಂಗತ್ಯ–ಶೃತಿ ಬಿ. ಭಜಂತ್ರಿ, ಸುಧೀರ್ ಫಡ್ನೀಸ್, ಟಿ.ಎಂ. ಮೈಲಾರಪ್ಪ, ಬಿ. ನಾರಾಯಣ, ಬೆಳಕು–ಶಿವಾನಂದ ಇಂಗೇಶ್ವರ್, ರಂಗ ವಿನ್ಯಾಸ–ಸುಧೀರ್ ಫಡ್ನೀಸ್, ಪ್ರಸಾದನ–ಶಶಿಕಾಂತ ಪಾಟೀಲ ಮತ್ತು ಮಂಜುಳಾ ನಾಗರಾಜ, ವಸ್ತ್ರ ವಿನ್ಯಾಸ–ಆರ್ ಎಸ್. ಶ್ಯಾಮಸುಂದರ ಮತ್ತು ವಿದ್ಯಾ ಭಟ್, ರಂಗ ಪರಿಕರಗಳು–ಡಾ. ಎಂ. ಕೆ. ಧೀರೇಂದ್ರ ರಾವ್, ಶಿಲ್ಪಾ ಹರಿಪ್ರಿಯ, ಶಿವಪ್ಪ ಎಂ., ಶೈಲ ಕುಮಾರ್, ರಂಗ ಸಜ್ಜಿಕೆ–ವಿನೋದ ಕುಮಾರ್ ಮತ್ತು ಎ.ಟಿ. ಶ್ರೀನಿವಾಸ, ಪ್ರಚಾರ ವಿನ್ಯಾಸ–ಪ್ರಕಾಶ್ ಶೆಟ್ಟಿ ಉಳೆಪಾಡಿ, ರಂಗ ನಿರ್ವಹಣೆ–ಆಶಾ ಶ್ಯಾಮಸುಂದರ. ಅ

***ಅಭಿಮತ ವರದಿ***







# ಸೇವಂತಿ ಪ್ರಸಂಗ :
## ಒಂದು ಆಕರ್ಷಕ ರಂಗ ಪ್ರಯೋಗ

ಮೈಸೂರಿನ ರಂಗಾಯಣದ ಭೂಮಿಗೀತದಲ್ಲಿ ದೆಹಲಿ ಕರ್ನಾಟಕ ಸಂಘದ ಸಾಂಸ್ಕೃತಿಕ ತಂಡ 'ಸೇವಂತಿ ಪ್ರಸಂಗ' ನಾಟಕವನ್ನು ಈಚೆಗೆ (ಜೂನ್ 20 ರಂದು) ಪ್ರದರ್ಶಿಸಿತು. ರಂಗಾಯಣದ ಹಿರಿಯ ಕಲಾವಿದ ಮಂಜುನಾಥ ಬೆಳಕೆರೆ ಈ ನಾಟಕವನ್ನು ನಿರ್ದೇಶಿಸಿದ್ದಾರೆ.

ಕನ್ನಡದ ಸೃಜನಶೀಲ ಕಥೆಗಾರ, ಕವಿ, ನಾಟಕಕಾರ ಜಯಂತಕಾಯ್ಕಿಣಿಯವರ ಇಂಗ್ಲಿಷ್ ಸಿನಿಮಾ ಆಧಾರಿತ ಈ ನಾಟಕ 'ಸೇವಂತಿ ಪ್ರಸಂಗ' ಆಧುನಿಕ ಬದುಕಿನ ಧಾವಂತ, ಆಸೆ–ನಿರಾಸೆ, ಸ್ವಾರ್ಥಪರ ಪ್ರವೃತ್ತಿಯನ್ನು ಢಾಳಾಗಿ ಬಿಂಬಿಸುತ್ತದೆ. ಕೊಳೆಗೇರಿಯ ತಿಪ್ಪೇಕ್ರಾಸಿನ ಬಲೂನ್ ಮಾರುವ ಹುಡುಗಿಯೊಬ್ಬಳನ್ನು ಅವಳಲ್ಲಿನ ಭಾಷಾ ವೈವಿಧ್ಯತೆಯನ್ನು ಗಮನಿಸಿದ ಭಾಷಾಪಂಡಿತ ಭಾರ್ಗವಶಾಸ್ತ್ರಿ ಆಕೆಯನ್ನು ಕೇವಲ 6 ತಿಂಗಳಲ್ಲಿ 'ಮಿಸ್ ರಾಜಧಾನಿ'ಯನ್ನಾಗಿ ಮಾಡುವ ಪ್ರತಿಜ್ಞೆಯನ್ನು ಮಾಡುತ್ತಾನೆ. ಇದಕ್ಕೆ ಸಂಸ್ಕೃತಪಂಡಿತ ಕ್ಯಾಪ್ಟನ್ ಕಲ್ಯಾಣಪುರ್‌ಕರ್ ತಾನು ಸ್ಪಾನ್ಸರ್ ಮಾಡುವ ಅಭಯ ನೀಡುತ್ತಾನೆ. ಹಾಗೇನೇ 'ಮಿಸ್ ರಾಜಧಾನಿ' ಆಗಬೇಕೆಂಬ ಆಸೆಯೊಂದಿಗೆ ಸೇವಂತಿ ಭಾರ್ಗವಶಾಸ್ತ್ರಿಯ ಮನೆಯನ್ನು ಸೇರುತ್ತಾಳೆ. ತಾನು ಮಿಸ್ ಸೇವಂತಿಯಾಗಿಯೇ ಇರಬೇಕೆಂಬ ಆಸೆ, ಛಲವನ್ನು ಆವಾಹಿಸಿಕೊಂಡ ಹುಡುಗಿ ಹಠ ಸಾಧಿಸಿ ತಯಾರಾಗಿಯೇ ಬಿಡುತ್ತಾಳೆ. ರಾಜಧಾನಿಯಲ್ಲಿ ನಡೆಯುವ ಸೌಂದರ್ಯ ಸ್ಪರ್ಧೆಯಲ್ಲಿ 'ಮಿಸ್ ಸೇವಂತಿ' ಕಿರೀಟವನ್ನು ಧರಿಸುತ್ತಾಳೆ.

ಇಲ್ಲಿಂದ ಭಾರ್ಗವಶಾಸ್ತ್ರಿಯ ಮಾನವಸಹಜ ಸ್ವಾರ್ಥ, ಈಗೋ, ಧನದಾಹ ಹೆಚ್ಚುತ್ತಾ ಹೋಗಿ ಕೀರ್ತಿಶನಿಯ ಬೆನ್ನುಬಿದ್ದು ಮಿಸ್ ಸೇವಂತಿಯನ್ನು ತನ್ನ ಪ್ರಸಿದ್ಧಿಗಾಗಿ ಬಳಸಿಕೊಳ್ಳಲು ಹವಣಿಸುತ್ತಾನೆ. ಅವನಿಗೆ ಆಕೆ ಒಂದು 'ಸರಕು' ಆಗಿ ಗೋಚರಿಸುತ್ತಾಳೆ. "ನಡಿಗೆ ನನ್ನದು–ನಡೆದವಳು ಅವಳು, ಭಾಷೆ ನನ್ನದು–ದೇಹ ಅವಳದು–ಇದು ಭಾರ್ಗವಶಾಸ್ತ್ರಿಯ ವಿಜಯ" ಎಂಬ ಮಾತುಗಳು ಆತನ 'ಅಹಂ'ನ್ನು ಮಾರ್ಮಿಕವಾಗಿ ತೆರೆದಿಡುತ್ತದೆ. ಈಗ ಬದುಕಿನ ನಗ್ನ ಸತ್ಯವನ್ನು ಅರಿತ ಮಿಸ್ ಸೇವಂತಿ "ತಾನು ಯಾಕಾದರೂ ಈ ಸ್ವಾರ್ಥ ಕೂಪಕ್ಕೆ ಬಿದ್ದೆ" ಎಂದು ಪರಿತಪಿಸಿ ಕೊನೆಗೆ ಆ ಸುಖಃ, ಪ್ರಸಿದ್ಧಿ, ಶಾಸ್ತ್ರಿ, ಕ್ಯಾಪ್ಟನ್–ಎಲ್ಲವನ್ನೂ–ಎಲ್ಲರನ್ನೂ ಧಿಕ್ಕರಿಸಿ ತನ್ನ ಮೂಲ ನೆಲೆಗೆ ಹಿಂತಿರುಗಿ ಬಂದು ನಿಂತು ಮಾನಸಿಕ ನೆಮ್ಮದಿಯನ್ನು ಕಂಡುಕೊಳ್ಳುವ ಸಂಕೇತವಾಗಿ ಪುನಃ ಬಲೂನ್ ಹಿಡಿಯುತ್ತಾಳೆ. "ತಿಪ್ಪೇಕ್ರಾಸಿನ ಹುಡುಗಿ ಸೇವಂತಿಯನ್ನು ನೀವೆಲ್ಲರೂ ಕೊಂದು ಬಿಟ್ಟಿರಿ" ಎಂಬ ಅವಳ ಮಾತು ಇಡೀ ವ್ಯವಸ್ಥೆಯನ್ನು ಮಾರ್ಮಿಕವಾಗಿ ಧ್ವನಿಸುತ್ತದೆ.

ಇಲ್ಲಿ ಬರುವ ಸಾರಾಯಿಅಂಗಡಿ ದೃಶ್ಯ, ಹಣಕ್ಕಾಗಿ ಶಾಸ್ತ್ರಿಯನ್ನು ಬ್ಲಾಕ್‌ಮೇಲ್ ಮಾಡುವ ಸೇವಂತಿಯ ತಂದೆ, ಮುಂದೆ ಆತನ ರಾಜಕೀಯ ಪ್ರವೇಶ, ಕಾರ್ಪೋರೇಟ್ ಜಗತ್ತಿನ ಒಳ ಸುಳಿಗಳು, ಸಿನಿಮಾ ಡೈರೆಕ್ಟರ್ ಪಾತ್ರ ಮುಂತಾದ ಎಲ್ಲವೂ ಪ್ರಸ್ತುತ ಬದುಕಿನ ಸಾಮಾಜಿಕ, ರಾಜಕೀಯ ಹಾಗೂ ವೈಯಕ್ತಿಕ ಬದುಕಿನ ತೆವಲುಗಳನ್ನು ಬಿಂಬಿಸುತ್ತವೆ.

'ಮಳೆ ಬಂತು ಮಳೆ' ಹಾಡಿನಿಂದ ಪ್ರಾರಂಭವಾಗುವ ಈ ನಾಟಕದಲ್ಲಿ ಛತ್ರಿಗಳ ದೃಶ್ಯ, ಬಲೂನ್ ದೃಶ್ಯ, ಕೊಳೆಗೇರಿಯ ಚಿತ್ರಣ, ಪಟ್ಟಾಲದಮ್ಮನ ಸಾರಾಯಿ ಅಂಗಡಿ ದೃಶ್ಯ ಮುಂತಾದವುಗಳು ನಿರ್ದೇಶಕರ ತಂತ್ರಗಾರಿಕೆಗೆ ಒತ್ತು ನೀಡುತ್ತವೆ. ಬೆಳಕು, ರಂಗಸಜ್ಜಿಕೆ, ಪ್ರಸಾಧನ ಮುಂತಾದವು ಹಿತಮಿತವಾಗಿವೆ. ಸಂಗೀತ ಸ್ಪಷ್ಟವಾಗಿ ಪ್ರೇಕ್ಷಕರಿಗೆ ತಲುಪಲಿಲ್ಲ. ಒಟ್ಟಾರೆಯಾಗಿ 'ಸೇವಂತಿ ಪ್ರಸಂಗ' ಪ್ರೇಕ್ಷಕರನ್ನು ಸೆಳೆಯುವಲ್ಲಿ ಸಫಲವಾಗಿದೆ.

ಸೇವಂತಿ–1 ಆಗಿ ಶ್ರೀಮತಿ ಶಿಲ್ಪಾ ಹರಿಪ್ರಿಯ ತಮ್ಮ ಚುರುಕು ಅಭಿನಯದಿಂದಾಗಿ ಗಮನ ಸೆಳೆಯುತ್ತಾರೆ. 2ನೇ ಸೇವಂತಿಯಾಗಿ ವಿದ್ಯಾಭಟ್ ರವರು ಮಿಸ್ ಸೇವಂತಿಯ ತಳಮಳವನ್ನು ಇನ್ನೂ ಹೆಚ್ಚು ಪರಿಣಾಮಕಾರಿಯಾಗಿ ಬಿಂಬಿಸಬಹುದಿತ್ತು. ಭಾರ್ಗವ ಶಾಸ್ತ್ರಿಯಾಗಿ ನಾರಾಯಣ ಬಿ. ಅವರು ಆ ಪಾತ್ರಕ್ಕೆ ಇನ್ನೂ ಹೆಚ್ಚಿನ ಕಳೆ ತರಬಹುದಾಗಿತ್ತು. ನೀಳಕಾಯದ ಮೈಲಾರಪ್ಪನವರು ಕ್ಯಾಪ್ಟನ್ ಕಲ್ಯಾಣಪುರ್‌ಕರ್ ಪಾತ್ರದಲ್ಲಿ ಆಕರ್ಷಕವಾಗಿ ಕಾಣಿಸುತ್ತಾರೆ. ಪಟ್ಟಾಲದಮ್ಮನ ಪಾತ್ರದಲ್ಲಿ ಆಶಾ ಶ್ಯಾಮಸುಂದರ್ ತಮ್ಮ ಕತ್ತಿ–ಗತ್ತಿನಿಂದಾಗಿ ಪ್ರೇಕ್ಷಕರಲ್ಲಿ ನಗೆ ಉಕ್ಕಿಸುತ್ತಾರೆ. ಪೂಜೆ ಭಟ್ರು (ಶಿವಾನಂದ ಇಂಗಳೇಶ್ವರ) ಜವರಣ್ಣ (ಎ.ಟಿ. ಶ್ರೀನಿವಾಸ್) ಸರಸಮ್ಮ (ಆಶಾಲತಾ ಮಹದೇವ) ಸಿನಿಮಾ ಡೈರೆಕ್ಟರ್ (ಪ್ರಕಾಶ್ ಶೆಟ್ಟಿ ಉಳೆಪಾಡಿ) ಕೊಳೆಗೇರಿ ಹುಡುಗಿಯಾಗಿ (ಕು॥ ಸಂಜನಾ) ಹೀಗೆ ಎಲ್ಲರೂ ಹಿತಮಿತವಾಗಿ ಅಭಿನಯಿಸಿದ್ದಾರೆ.

ರಾಜಧಾನಿ ದೆಹಲಿಯಲ್ಲಿ ವಿವಿಧ ಉದ್ಯೋಗ ನಿಮಿತ್ತಾ ನೆಲೆಸಿರುವ ಕನ್ನಡಿಗರನ್ನು ಒಂದೆಡೆ ಕೆಲಹಾಕಿ ನಾಟಕಕ್ಕೆ ಅವರನ್ನು ಅಣಿಗೊಳಿಸುವುದು ಸುಲಭದ ಕೆಲಸವಲ್ಲ. ಇದನ್ನು ಒಂದು ಸಾಹಸವನ್ನಾಗಿ ಕೈಗೆತ್ತಿಕೊಂಡು ಮುನ್ನಡೆದ ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷ ವಸಂತ ಶೆಟ್ಟಿ ಬೆಳ್ಳಾರೆಯವರೊಂದಿಗೆ ಹಿರಿಯ ಕಲಾವಿದ ಮಂಜುನಾಥ ಬೆಳಕೆರೆಯವರನ್ನು ನಿಯೋಜಿಸಿ ಹೊರನಾಡ ಕನ್ನಡಿಗರಿಗಾಗಿ ಈ ನಾಟಕವನ್ನು ಸಿದ್ಧಪಡಿಸುವಲ್ಲಿ ಸಹಕರಿಸಿದ ರಂಗಾಯಣದ ನಿರ್ದೇಶಕರಾದ ಜನಾರ್ದನ ಹೆಚ್ (ಜೆನ್ನಿ) ಯವರ ಪಾತ್ರ ಹಿರಿದು. ಈ ಕಾರಣಕ್ಕಾಗಿ ಈ ಮೂವರೂ ಅಭಿನಂದನಾರ್ಹರು. ಹೀಗೆ ಬೇರೆ ಬೇರೆ ಕಡೆಯಲ್ಲಿ ನೆಲೆಸಿರುವ 'ಹೊರನಾಡ ಕನ್ನಡಿಗ'ರಾಗಿ ರಂಗ ಚಟುವಟಿಕೆಯನ್ನು ಹಮ್ಮಿಕೊಳ್ಳಲು ಮೈಸೂರು ರಂಗಾಯಣ ಸರ್ಕಾರ ಮತ್ತು ಇಲಾಖೆಯ ಸಹಕಾರದೊಂದಿಗೆ ಇನ್ನೂ ಹೆಚ್ಚಿನ ಕೊಡು–ಕೊಳ್ಳುವಿಕೆಯ ಪಾತ್ರ ನಿರ್ವಹಿಸಿದಲ್ಲಿ ಅದು ಕನ್ನಡ ರಂಗಭೂಮಿಯ ಹರಿವು ಮತ್ತು ಹರವು ಕಾರ್ಯಕ್ಕೆ ದೊಡ್ಡ ಕೊಡುಗೆಯಾಗಬಲ್ಲದು. ಅ

***ಡಾ.ಎಚ್.ಎಂ.ಕುಮಾರಸ್ವಾಮಿ, ಮೈಸೂರು***





# ಮೈಸೂರಿನ ರಂಗಾಯಣದಲ್ಲಿ ಸಂಘದ ಕಲಾವಿದರ ನಾಟಕ ಸೇವಂತಿ ಪ್ರಸಂಗ ಸರಳ ಸುಂದರ ನಿರೂಪಣೆ



ಮೈಸೂರಿನ ರಂಗಾಯಣ ಭೂಮಿಗೀತದಲ್ಲಿ ಹಮ್ಮಿಕೊಂಡಿದ್ದ ಹವ್ಯಾಸಿ ನಾಟಕೋತ್ಸವದಲ್ಲಿ ಇದೇ ಜೂನ್ 20ರಂದು ದೆಹಲಿ ಕರ್ನಾಟಕ ಸಂಘದ ಕಲಾವಿದರು ರಂಗಾಯಣದ ಹಿರಿಯ ಕಲಾವಿದ ಮಂಜುನಾಥ ಬೆಳಕೆರೆ ಅವರ ನಿರ್ದೇಶನದಲ್ಲಿ ಡಾ॥ ಜಯಂತ್ ಕಾಯ್ಕಿಣಿ ವಿರಚಿತ 'ಸೇವಂತಿ ಪ್ರಸಂಗ' ನಾಟಕವನ್ನು ಯಶಸ್ವಿಯಾಗಿ ಪ್ರದರ್ಶಿಸಿದರು.

ಕೊಳಚೆ ಪ್ರದೇಶದ ಸೇವಂತಿ ಎಂಬ ಬಲೂನ್ ಮಾರುವ ಹುಡುಗಿ ಅನಕ್ಷರಸ್ಥ ತಂದೆ ಹಾಗೂ ಮಲತಾಯಿ ಜೊತೆ ಇರುತ್ತಾಳೆ. ಬಲೂನ್ ಮಾರಾಟ ಮಾಡುವಾಗ ಈಕೆಯನ್ನು ಭೇಟಿಯಾದ ಭಾಷಾಶಾಸ್ತ್ರ ವಿದ್ವಾಂಸ ಭಾರ್ಗವ ಶಾಸ್ತ್ರಿ ಆಕೆಯಲ್ಲಿನ ಅನಾಗರಿಕ ಸಂಸ್ಕೃತಿಯ ಭಾಷೆ, ಜೀವನ ಶೈಲಿಯನ್ನು ಗಮನಿಸಿ ತನ್ನ ಮಿತ್ರ ಸಂಸ್ಕೃತ ಪಂಡಿತ ಕ್ಯಾಪ್ಟನ್ ಕಲ್ಯಾಣ್‌ಪುರ್‌ಕರ್ ಎದುರು ಸೇವಂತಿಯನ್ನು ಕೇವಲ ಆರು ತಿಂಗಳಲ್ಲಿ ಮಿಸ್ ರಾಜಧಾನಿಯನ್ನಾಗಿ ಮಾಡುತ್ತೇನೆ ಎಂದು ಪಣ ತೊಡುತ್ತಾನೆ. ಸೇವಂತಿಯನ್ನು ಇದಕ್ಕೆ ಒಪ್ಪಿಸಿ ಭಾರ್ಗವ ಶಾಸ್ತ್ರಿ ತನ್ನ ಮನೆಯಲ್ಲಿರಿಸಿಕೊಂಡು ಅವಳನ್ನು ಮಿಸ್ ರಾಜಧಾನಿ ಮಾಡುವಲ್ಲಿ ಯಶಸ್ವಿಯಾಗುತ್ತಾನೆ. ಅವಳ ಸೌಂದರ್ಯಕ್ಕೆ ಮಾರುಹೋದ ಸಮಾಜದ ದುಷ್ಟಶಕ್ತಿಗಳು ಅವಳನ್ನು ಬಳಸಿಕೊಳ್ಳಲು ಪ್ರಯತ್ನಿಸುತ್ತಾರೆ. ಇದರಿಂದ ಕುಪಿತಳಾದ ಸೇವಂತಿ ತನ್ನ ಹಿಂದಿನ ಜೀವನವೇ ಚೆನ್ನಾಗಿತ್ತು ಎಂದು ಭಾವಿಸುತ್ತಾಳೆ. ಭಾರ್ಗವ ಶಾಸ್ತ್ರಿಯಿಂದ ದೂರವಾಗಿ ಮತ್ತೆ ಕೊಳಗೇರಿಯತ್ತ ಮುಖ ಮಾಡುತ್ತಾಳೆ. ಅಲ್ಲೂ ತನ್ನ ತಂದೆಯಿಂದಲೇ ತಿರಸ್ಕರಿಸಲ್ಪಡುತ್ತಾಳೆ. ಇಲ್ಲೂ ಸಲ್ಲದೆ ಅಲ್ಲೂ ಸಲ್ಲದಂತಾಗುತ್ತಾಳೆ. ಇಂತಹ ಸರಳ ಕಥೆಯನ್ನು ನಾಟಕ ರೂಪದಲ್ಲಿ ಡಾ. ಜಯಂತ ಕಾಯ್ಕಿಣಿ ಕಟ್ಟಿಕೊಟ್ಟು ಯಶಸ್ವಿಯಾಗಿದ್ದಾರೆ. ನಿರ್ದೇಶಕ ಮಂಜುನಾಥ ಬೆಳಕೆರೆ ಅಷ್ಟೆ ಸಮರ್ಥವಾಗಿ ನಾಟಕವನ್ನು ನಿರ್ದೇಶಿಸಿದ್ದಾರೆ.

ಈ ನಾಟಕದಲ್ಲಿ ಅಭಿನಯಿಸಿರುವ ಪ್ರತಿಯೊಬ್ಬ ಕಲಾವಿದರು ನಿಷ್ಠೆಯಿಂದ ಕೆಲಸ ಮಾಡಿದ್ದಾರೆ. ಸೇವಂತಿ–1 ಮತ್ತು ಸೇವಂತಿ–2ರ ಪಾತ್ರದಲ್ಲಿ ಶಿಲ್ಪ ಹರಿಪ್ರಿಯ ಹಾಗೂ ವಿದ್ಯಾ ಭಟ್ ತಮ್ಮ ನೈಜ ಅಭಿನಯದಿಂದ ಪ್ರೇಕ್ಷಕರ ಮೆಚ್ಚುಗೆಗೆ ಪಾತ್ರರಾಗುತ್ತಾರೆ. ಭಾರ್ಗವ ಶಾಸ್ತ್ರಿಯಾಗಿ ಬಿ. ನಾರಾಯಣ ಅವರು ಪಾತ್ರವನ್ನು ನಿಭಾಯಿಸುವುದರಲ್ಲಿ ಅಲ್ಲಲ್ಲಿ ಸ್ವಲ್ಪ ಕಷ್ಟಪಡುವುದು ಗೋಚರವಾಗುತ್ತಿತ್ತು. ಭಾರ್ಗವ ಶಾಸ್ತ್ರಿಯ ಮನೆಯ ಕೆಲಸದವಳಾಗಿ ಆಶಾಲತ ಮಹದೇವ್, ಪಟಾಲಮ್ಮ ಅಮ್ಮಾಜಿಯಾಗಿ ಆಶಾ ಶ್ಯಾಮ ಸುಂದರ್ ಗಮನ ಸೆಳೆದರು. ಎ.ಟಿ. ಶ್ರೀನಿವಾಸ, ಆರ್.ಎನ್. ಶ್ಯಾಮಸುಂದರ, ಎಂ. ಶಿವಪ್ಪ, ವಿನೋದ ಕುಮಾರ, ಶೈಲಾ ಕುಮಾರ್, ಪ್ರಕಾಶ್ ಶೆಟ್ಟಿ ಉಳೆಪಾಡಿ, ದೀಪಾ ಶಿವಪ್ಪ, ಮಂಜುಳಾ ನಾಗರಾಜ್, ಶಿವಾನಂದ ಇಂಗಳೇಶ್ವರ್, ಹರಿಪ್ರಿಯ, ಸಂಜನ, ಮಹದೇವ್, ಸುಧೀರ್ ಫಡ್ನೀಸ್, ಸಾನ್ವಿ ಕುಮಾರ್, ವಿಸ್ಮಯ ಕುಮಾರ್, ಅಭಿಷೇಕ್ ಮುಂತಾದವರು ತಮ್ಮ ಪಾತ್ರಗಳಿಗೆ ನ್ಯಾಯ ಒದಗಿಸಿದರು.

ರಂಗಸಜ್ಜಿಕೆ (ವಿನೋದಕುಮಾರ್, ಎ.ಟಿ. ಶ್ರೀನಿವಾಸ), ಬೆಳಕು (ಶಿವಾನಂದ ಇಂಗಳೇಶ್ವರ) ರಂಗವಿನ್ಯಾಸ (ಸುಧೀರ್ ಫಡ್ನೀಸ್) ತೃಪ್ತಿಕರವಾಗಿತ್ತು. ಸಂಗೀತ (ಭೀಮಸೇನ್ ಭಜಂತ್ರಿ) ಇನ್ನಷ್ಟು ಸುಧಾರಿಸಬೇಕು.

ನಾಟಕದ ಅವಧಿಯನ್ನು ಇನ್ನಷ್ಟು ಮೊಟಕುಗೊಳಿಸಿ ವೇಗಕ್ಕೆ ಒತ್ತುಗೊಳಿಸಿದರೆ ನಾಟಕ ಇನ್ನೂ ಪರಿಣಾಮಕಾರಿಯಾಗಿ ಮೂಡಿಬರುತ್ತದೆ. ಒಟ್ಟಾರೆ ಇಂತಹ ಪ್ರಯತ್ನಕ್ಕೆ ಇಂಬುಕೊಟ್ಟ ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರಾದ ವಸಂತ ಶೆಟ್ಟಿ ಬೆಳ್ಳಾರೆ ಅಭಿನಂದನಾರ್ಹರು. ಅ

***ರಾಜಶೇಖರ ಕದಂಬ, ಮೈಸೂರು***

## ಸಂಘದಲ್ಲಿ ಭಕ್ತ ಕನಕದಾಸ ಹರಿಕಥೆ



ದೆಹಲಿ ಕರ್ನಾಟಕ ಸಂಘದಲ್ಲಿ ಇದೇ ಜೂನ್ 28ರಂದು ಭಕ್ತ ಕನಕದಾಸ ಹರಿಕಥಾ ಪ್ರಸಂಗವನ್ನು ಭದ್ರಗಿರಿ ಅಚ್ಚುತದಾಸರ ಶಿಷ್ಯರಾದ ಶ್ರೀ ಈಶ್ವರದಾಸ ಕೊಪ್ಪೇಸರ ಅವರು ಅತ್ಯಂತ ಅರ್ಥಗರ್ಭಿತವಾಗಿ ನಡೆಸಿಕೊಟ್ಟರು. ಕನಕದಾಸರು ಜೀವನವನ್ನೇ ಸಮಾಜ ಸೇವೆಗಾಗಿ ಮುಡಿಪಾಗಿಟ್ಟ ಕಥೆಯನ್ನು ಸುಂದರವಾದ ದೃಷ್ಟಾಂತಗಳ ಜೊತೆಗೆ ಹೆಣೆದು ಇಂದಿನ ಸಮಾಜದ ಕುಂದುಕೊರತೆಗಳನ್ನು ಸ್ವಾರ್ಥಭರಿತ ಜೀವನವನ್ನು ಪ್ರಶ್ನಿಸುತ್ತಾ ಕನಕದಾಸ ತ್ಯಾಗಮಯ ಜೀವನ ಹಾಗೂ ವೇದಶಾಸ್ತ್ರ, ಉಪನಿಷತ್ತುಗಳ ಗುವಾರ್ಥವನ್ನು ಅತ್ಯಂತ ಸರಳ ಕನ್ನಡದಲ್ಲಿ ಅನುವಾದಿಸಿ ಜನ ಸಾಮಾನ್ಯರ ಮನಮುಟ್ಟಿಸಲು ಅದನ್ನು ವಿವರಿಸಿದರು. ಹರಿಕಥಾ ಪ್ರಸಂಗಗಳಂತಹ ಒಂದು ಪರಂಪರೆಯೇ ಇಂದು ನಶಿಸಿಹೋಗುತ್ತಿರುವ ಅಪಾಯದ ಅಂಚಿನಲ್ಲಿರುವ ಈ ಅದ್ಭುತ ಕಥೆಯನ್ನು ಶ್ರೀ ಈಶ್ವರದಾಸರು ಉಳಿಸಿ, ಬೆಳೆಸಿಕೊಂಡು ಹೋಗುತ್ತಿರುವುದು ಅತ್ಯಂತ ಶ್ಲಾಘನೀಯ. ಅವರಿಗೆ ಹಾರ್ಮೋನಿಯಂ ಸಾಥಿಯಾಗಿ ಶ್ರೀ ಉಮೇಶ್ ಅವರು ಅತ್ಯಂತ ಸುಂದರವಾಗಿ ಹಾರ್ಮೋನಿಯಂ ನುಡಿಸಿದರು. ಶ್ರೀ ಸುಧೀರ್ ಫಡ್ನೀಸ್ ಅವರು ತಬಲ ಸಾಥಿ ನೀಡಿ ಸಹಕರಿಸಿದರು. ಡಾ. ಅವನೀಂದ್ರನಾಥ್ ರಾವ್ ಅವರ ಧನ್ಯವಾದಗಳೊಂದಿಗೆ ಕಾರ್ಯಕ್ರಮ ಮುಕ್ತಾಯವಾಯಿತು. ಅ

***ಸಖಾರಾಮ ಉಪ್ಪೂರು***



# ಸೂಕ್ಷ್ಮ ಮನಸಿನ ಪತ್ರಕರ್ತ ಡಿ. ಉಮಾಪತಿ

*ವಿಜಯ ಕರ್ನಾಟಕ ಪತ್ರಿಕೆಯ ದೆಹಲಿ ಪ್ರತಿನಿಧಿ, ಡೆಲ್ಲಿ ಡೈರಿ ಅಂಕಣ ಬರಹಗಾರ ಡಿ. ಉಮಾಪತಿ ಅವರಿಗೆ 'ಬೆಂಗಳೂರು ಪ್ರೆಸ್ ಕ್ಲಬ್' ವರ್ಷದ 'ಶ್ರೇಷ್ಠ ಪತ್ರಕರ್ತ' ಪ್ರಶಸ್ತಿ ನೀಡಿ ಗೌರವಿಸಿದೆ. ಬೆಂಗಳೂರಿನಲ್ಲಿ ನಡೆದ ಸಮಾರಂಭವೊಂದರಲ್ಲಿ ರಾಜ್ಯದ ಸಚಿವ ಶ್ರೀ ಎಚ್.ಕೆ. ಪಾಟೀಲ್, ಮುಖ್ಯಮಂತ್ರಿಯವರ ಮಾಧ್ಯಮ ಸಲಹಾಗಾರ ಶ್ರೀ ದಿನೇಶ್ ಅಮೀನ್ ಮಟ್ಟು, ಕವಿ ಎಸ್.ಜಿ. ಸಿದ್ದರಾಮಯ್ಯ ಮೊದಲಾದವರು ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಪಾಲ್ಗೊಂಡಿದ್ದರು. ಈ ಸಂದರ್ಭದಲ್ಲಿ ವಿದ್ವಾಂಸ ಡಾ. ಪುರುಷೋತ್ತಮ ಬಿಳಿಮಲೆ ಅವರು ಬಹಳ ಆತ್ಮೀಯವಾಗಿ ಅಭಿಮತಕ್ಕಾಗಿ ವಿಶೇಷ ಬರಹದ ಮೂಲಕ ಉಮಾಪತಿ ಅವರ ಚಿಂತನೆ ಮತ್ತು ವ್ಯಕ್ತಿತ್ವದ ಕುರಿತು ವಿವರ ನೀಡಿದ್ದಾರೆ. ಉಮಾಪತಿಯವರಿಗೆ ಅಭಿನಂದನೆಗಳು.*

*ಸಂ.*

ಗೆಳೆಯ ಉಮಾಪತಿಯವರನ್ನು ಕಳೆದ ಸುಮಾರು 25 ವರ್ಷಗಳಿಂದ ನಾನು ಬಲ್ಲೆ. ಆರಂಭದ ದಿನಗಳಲ್ಲಿ ಅವರು ಕನ್ನಡ ಪ್ರಭ ಉಮಾಪತಿ ಎಂದೇ ಜನಪ್ರಿಯರಾಗಿದ್ದರು. ಮುಂದಿನ ದಿನಗಳಲ್ಲಿ ಕನ್ನಡ ಪ್ರಭದ ವಿಚಾರ ಧಾರೆ ಬದಲಾದಾಗ ಅವರು ಆ ಪತ್ರಿಕೆಯನ್ನು ಬಿಟ್ಟು ವಿಜಯ ಕರ್ನಾಟಕ ಸೇರಿದರು. ಈಗ ಅವರು ಆ ಪತ್ರಿಕೆಯ ಪ್ರಧಾನ ವರದಿಗಾರ. ದೆಹಲಿಯ ಆಗು ಹೋಗುಗಳ ಜೊತೆಗೆ ದೇಶದ ಇತರ ಪ್ರದೇಶಗಳಲ್ಲಿ ನಡೆಯುವ ವಿದ್ಯಾಮಾನಗಳ ಬಗ್ಗೆ ಅತ್ಯಂತ ಸೂಕ್ಷ್ಮವಾಗಿ ಬರೆಯುವ ಉಮಾಪತಿಯವರು ತಮ್ಮ ಜನಪರ ನಿಲುವುಗಳಲ್ಲಿ ಎಂದೂ ರಾಜಿ ಮಾಡಿಕೊಂಡವರಲ್ಲ. ಹಿಂದುಳಿದವರ ಅದರಲ್ಲೂ ದಲಿತರ ಬಗ್ಗೆ ಅಸ್ಖಲಿತ ಬದ್ಧತೆಯಿಂದ ಬರೆಯುತ್ತಿರುವ ಅವರು ಓದುಗರನ್ನು ಸದಾ ಬೆಳೆಸಿದ್ದಾರೆ. ಜೊತೆಗೆ ಎಷ್ಟೋ ಬಾರಿ ನನ್ನಂಥ ಹಲವರು ಆತ್ಮ ವಿಮರ್ಶೆ ಮಾಡಿಕೊಳ್ಳಲು ಪ್ರಚೋದನೆ ನೀಡಿದ್ದಾರೆ. ವಿಜಯ ಕರ್ನಾಟಕದಲ್ಲಿ ಅವರು ಬರೆದ ಕೆಲವು ಅಂಕಣಗಳು ನನ್ನ ನಿದ್ದೆಗೆಡಿಸಿದ್ದುಂಟು. ನೋಡುವಾಗ, ಮಾತಾಡುವಾಗ, ತಣ್ಣಗಿರುವ ವ್ಯಕ್ತಿಯಂತೆ ಕಾಣುವ ಉಮಾಪತಿಯವರ ಒಡಲಲ್ಲಿ ಶತಮಾನಗಳ ನೋವಿದೆ, ಅವಮಾನವಿದೆ ಮತ್ತು ಪ್ರತಿಭಟಿಸುವ ಮನೋಧರ್ಮವಿದೆ.

ಈಚಿನ ದಿನಗಳಲ್ಲಿ ಪತ್ರಕರ್ತರ ನಡವಳಿಕೆಗಳ ಬಗ್ಗೆ ಬಗೆ ಬಗೆಯ ಚರ್ಚೆಗಳು ನಡೆಯುತ್ತಿವೆ. ರಾಜಕಾರಣಿಗಳೂ ಸೇರಿದಂತೆ ಇತರ ಹಲವರ ಮೇಲೆ ಮಾಡುವ ಅರೋಪಗಳನ್ನು ನಾವು ಇದೀಗ ಸುಲಭವಾಗಿ ಪತ್ರಕರ್ತರ ಮೇಲೂ ಮಾಡಬಹುದು. ಬೇಕಾದಂತೆ ವರದಿಗಳನ್ನು ನಿರ್ಮಾಣ ಮಾಡುವ ಕಾಲವಿದು ಹಾಗೇ ಎಷ್ಟೋ ವಿಷಯಗಳು ಯಾರಿಗೂ ತಿಳಿಯದೆ ನಿರ್ನಾಮವಾಗುತ್ತವೆ ಕೂಡಾ. ಇಂಥ ಅನುಮಾನಾಸ್ಪದ ಸಂದರ್ಭದಲ್ಲಿ ಪತ್ರಿಕೋದ್ಯಮದ ಘನತೆ ಮತ್ತು ಗೌರವಗಳನ್ನು ಕಾಪಾಡಿಕೊಂಡು ಹೋಗುತ್ತಿರುವ ಉಮಾಪತಿಯವರು ನಮ್ಮ ನಡುವಿನ ಸೂಕ್ಷ್ಮ ಧ್ವನಿ ಮತ್ತು ಸಾರ್ವಜನಿಕ ಅಭಿಪ್ರಾಯಗಳನ್ನು ರೂಪಿಸುವ ಪ್ರಬಲ ಶಕ್ತಿ. ವ್ಯಾಪಕ ಓದು, ನಿರಂತರ ಚರ್ಚೆ, ಜನಗಳ ಒಡನಾಟ, ಜನಪರ ನಿಲುವು, ಇತ್ಯಾದಿಗಳಿಂದ ರೂಪುಗೊಂಡ ಅವರ ವ್ಯಕ್ತಿತ್ವ ಮತ್ತು ಬರವಣಿಗೆಯು ಅಸಾಮಾನ್ಯವಾದುದು. ಈ ಗುಣಗಳೇ ಅವರನ್ನು ಇಂದು ಅವರು ದೇಶದ ಪ್ರಮುಖ ಪತ್ರಕರ್ತರಲ್ಲಿ ಒಬ್ಬರನ್ನಾಗಿ ಮಾಡಿದೆ.

ದೆಹಲಿ ಕರ್ನಾಟಕ ಸಂಘದ ಮೇಲೆ ಉಮಾಪತಿಯವರು ಯಾವಾಗಲೂ ಒಂದು ಕಣ್ಣಿಟ್ಟಿರುತ್ತಾರೆ. ಸಂಘದ ಸಾಂಸ್ಕೃತಿಕ ಸಮುಚ್ಚಯ ಮೇಲೆ ಬರುವಲ್ಲಿ ದೆಹಲಿ ಪತ್ರಕರ್ತರ ಕೊಡುಗೆ ದೊಡ್ಡದು. ಆ ಕಾಲದಲ್ಲಿ ಅವರೆಲ್ಲ ಸಂಘದ ಬಗ್ಗೆ ಒಳ್ಳೆಯ ಮಾತುಗಳನ್ನು ಬರೆದರು. ಮುಖ್ಯಮಂತ್ರಿಗಳೂ ಸೇರಿದಂತೆ, ಕರ್ನಾಟಕದ ರಾಜಕೀಯ ಮುಖಂಡರು ದೆಹಲಿಗೆ ಬಂದಾಗಲೆಲ್ಲ ಸಂಘದ ಬಗ್ಗೆ ಹೇಳಿದವರು ಅವರು. ಈ ಕೆಲಸಗಳಲ್ಲಿ ಉಮಾಪತಿಯವರ ಕೊಡುಗೆ ತುಂಬಾ ಇದೆ ಎಂದು ನಾನು ಬಲ್ಲೆ. ಆದರೆ ಅವರೆಂದೂ ಅದರ ಬಗ್ಗೆ ಮಾತಾಡಿದವರಲ್ಲ.

ನಾನು ಸಂಘದ ಅಧ್ಯಕ್ಷನಾಗಿದ್ದ ಸಂದರ್ಭದಲ್ಲಿ ಉಮಾಪತಿಯವರು ಒಮ್ಮೆ ಸಿಕ್ಕಿದ್ದರು. 'ಏನು ಸಾರ್, ಸಪ್ಪಗಿದ್ದೀರಿ? ಅಂತ ಕೇಳಿದರು. ನಾನಂದೆ– 'ನೋಡಿ ಸಾರ್, ಸಂಘದ ಹೊಸ ಕಟ್ಟಡ ಉದ್ಘಾಟನೆಯಾಗಿ ವಾರವೂ ಕಳೆದಿಲ್ಲ. ಆಗಲೇ ಯಾರೋ ಬ್ಲೇಡಿನಿಂದ ಸೀಟು ಹರಿದು ಬಿಟ್ಟಿದ್ದಾರೆ, ಬೇಸರವಾಗದಿರುತ್ತದೆಯೇ?'. ಉಮಾಪತಿಯವರು ಮಾತಾಡಲಿಲ್ಲ, ಆದರೆ ಮರುದಿನ ಕನ್ನಡ ಪ್ರಭದಲ್ಲಿ ಅದನ್ನು ಸೊಗಸಾದ ವರದಿಯಾಗಿಸಿದ್ದರು.

ದೆಹಲಿಯ ಪತ್ರಕರ್ತರನ್ನು ತಿಂಗಳಿಗೊಮ್ಮೆಯಾದರೂ ಒಟ್ಟು ಸೇರಿಸಿ ಯಾವುದಾದರೂ ವಿಷಯದ ಮೇಲೆ ಚರ್ಚಿಸಿ, ಎಲ್ಲರೂ ಬೆಳೆಯುಂತೆ ಮಾಡಬೇಕೆಂಬಾಸೆ ಅವರದು. ಆದರೆ ಅದು ಸುಲಭದ ಕೆಲಸವಲ್ಲ ಎಂದೂ ಅವರಿಗೆ ಗೊತ್ತಿದೆ.

ಏನೇ ಇರಲಿ, ದಿಟ್ಟವಾಗಿ ಬರೆಯುವ ಯಾವುದೇ ಪತ್ರಕರ್ತರ ಮೇಲೆ ಇಂದು ಬಹುವಾದ ಒತ್ತಡಗಳಿರುವುದನ್ನು ಯಾರಾದರೂ ಊಹಿಸಬಹುದು. ಈ ಒತ್ತಡಗಳಿಗೆ ಪತ್ರಕರ್ತನೊಬ್ಬ ಬಲಿಯಾಗುವುದೆಂದರೆ, ಆರ್ಥಿಕವಾಗಿ ಭ್ರಷ್ಟನಾಗಿಬಿಡುವುದು, ಇಲ್ಲವೇ ನೈತಿಕ ದಿವಾಳಿತನದಿಂದ ಬರೆಹದ ಮೊನಚನ್ನು ಕಳೆದುಕೊಳ್ಳುವುದು. ಉಮಾಪತಿ ಇಂಥ ಅಪಾಯಗಳಿಂದ ಪಾರಾಗಿ, ಸುರಕ್ಷಿತವಾಗಿ ಇದುವರೆಗೆ ಉಳಿದಿದ್ದಾರೆ. ಅದಕ್ಕಾಗಿ ಅವರನ್ನು ಅಭಿನಂದಿಸುತ್ತೇನೆ.

ಅವರ ಆಯ್ದ ಲೇಖನಗಳ ಸಂಪುಟವೊಂದನ್ನು ದೆಹಲಿ ಕರ್ನಾಟಕ ಸಂಘವು ಹೊರತರುವಂತಾಗಲಿ ಎಂದು ಆಶಿಸುತ್ತೇನೆ. ಅ

***ಡಾ. ಪುರುಷೋತ್ತಮ ಬಿಳಿಮಲೆ***



## ರಂಗನಾಥ ಸಿಂಗಾರಿಯವರಿಗೆ ಡಾಕ್ಟರೇಟ್

ದೆಹಲಿ ಟೆಕ್ನಾಲಜಿಕಲ್ ವಿಶ್ವವಿದ್ಯಾಲಯದಲ್ಲಿ ಸಹಾಯಕ ಪ್ರಾಧ್ಯಾಪಕರಾಗಿರುವ ದೆಹಲಿ ಕರ್ನಾಟಕ ಸಂಘದ ಸದಸ್ಯ ಶ್ರೀ ರಂಗನಾಥ ಸಿಂಗಾರಿಯವರಿಗೆ 'ಇಂಡಸ್ಟ್ರೀಯಲ್ ಪ್ರೊಡಕ್ಷನ್' ವಿಷಯದಲ್ಲಿ ಸಲ್ಲಿಸಿದ ಮಹಾಪ್ರಬಂಧಕ್ಕೆ ದೆಹಲಿ ವಿಶ್ವವಿದ್ಯಾಲಯವು ಡಾಕ್ಟರೇಟ್ ಪದವಿ ನೀಡಿದೆ. ಅ

***ಬಿ.ಕೆ. ಬಸವರಾಜು***

# ಭಾವನಾತ್ಮಕ ಬರಹದ ಪ್ರೇಮ ಕಥೆ




**ಅಮೃತ ನೆನಪುಗಳು**

**ಇಮ್ರೋಜ್ ನೆನೆದಂತೆ ಅಮೃತಾ ಪ್ರೀತಮ್**

ಲೇಖಕರು : ರೇಣುಕಾ ನಿಡಗುಂದಿ
ಪ್ರಕಾಶಕರು : ಅಹಿರ್ನಿಶಿ ಪ್ರಕಾಶನ, ಶಿವಮೊಗ್ಗ
ಪುಟಗಳು : ೮೦
ಬೆಲೆ : ರೂ. ೮೦

ಸುಮಾರು ಇಪ್ಪತ್ತೆಂಟರಷ್ಟು ಕಾದಂಬರಿಗಳು, ಹದಿನೆಂಟರಷ್ಟು ಕವನ ಸಂಕಲನಗಳು, ಮತ್ತಷ್ಟು ಬರಹಗಳನ್ನು ಪ್ರಕಟಿಸಿ ಜ್ಞಾನಪೀಠ ಪ್ರಶಸ್ತಿ, ಪದ್ಮವಿಭೂಷಣ ಪ್ರಶಸ್ತಿ, ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿಗಳಲ್ಲದೇ ಇನ್ನೂ ಅದೆಷ್ಟೋ ಪುರಸ್ಕಾರಗಳನ್ನು ಪಡೆದು ಅಮರರಾದ ಅಮೃತಾ ಪ್ರೀತಂ ಅವರ ಆತ್ಮಚರಿತ್ರೆ ರಸೀದಿ ಟಿಕೇಟು (ರೆವೆನ್ಯೂ ಸ್ಟ್ಯಾಂಪ್)ನಲ್ಲಿ ಮೂಡದ ಬದುಕಿನ ಸಂಗತಿಗಳು ಇನ್ನಷ್ಟು ಕತೆಗಳನ್ನು ಹೇಳುತ್ತವೆ. ಈಗಿನ ಪಾಕಿಸ್ಥಾನದಲ್ಲಿರುವ ಪಂಜಾಬಿನ ಗುಜ್ರಾನ್‌ವಾಲದಲ್ಲಿ ಅಮೃತಾ ಕೌರ್ ಆಗಿ ಜನಿಸಿ ಪಂಜಾಬಿ ಭಾಷೆಯ ಅತ್ಯಂತ ಪ್ರಮುಖ ಲೇಖಕಿಯಾದ ಅಮೃತಾ ಪ್ರೀತಂ ಅವರ ಬದುಕೇ ಒಂದು ಪ್ರಣಯ ಕತೆ.

ಅಮೃತಾ ಎಳವೆಯಲ್ಲಿ ಲಾಹೋರ್‌ನಲ್ಲಿ ಸಂಪಾದಕನಾಗಿದ್ದ ಪ್ರೀತಂ ಸಿಂಘ್‌ನನ್ನು ತನ್ನ ಹದಿನಾರರ ಹರೆಯದಲ್ಲಿ ಮದುವೆಯಾಗಿ ಇಪ್ಪತ್ತೈದು ವರ್ಷಗಳ ನಂತರ ಆತನನ್ನು ತೊರೆದರು. ಮುಂದೆ ಕವಿ ಸಾಹಿರ್ ಲುಧ್ಯಾನ್ವಿಯೊಂದಿಗೆ ಅಮೃತಾ ಪ್ರೀತಂ ಅವರಿಗೆ ಪ್ರೇಮಾಂಕುರವಾಗುತ್ತದೆ. ದೀರ್ಘ ಕಾಲದ ನಂತರ ಸಾಹಿರ್ ಲುಧ್ಯಾನ್ವಿಗೆ ಗಾಯಕಿ ಸುಧಾ ಮಲ್ಹೋತ್ರ ಜತೆ ಪ್ರೇಮಾಂಕುರಗೊಂಡು ಅಮೃತಾರಿಂದ ದೂರವಾಗುತ್ತಾರೆ. ಈ ನಡುವೆ ತನ್ನಿಂದ ಏಳು ವರ್ಷ ಕಿರಿಯವನಾದ ಚಿತ್ರಕಾರ ಇಮ್ರೋಜ್ ಎಂಬ ಹುಡುಗನು ಅಮೃತಾ ಅವರ ಬದುಕಿನಲ್ಲಿ ಬರುತ್ತಾನೆ. ಅವರಿಬ್ಬರೂ ಸುಮಾರು ನಲ್ವತ್ತಕಿಂತಲೂ ಹೆಚ್ಚು ವರ್ಷ ಜತೆಯಲ್ಲಿಯೇ ಬದುಕುತ್ತಾರೆ. ಆದರೆ ಮದುವೆಯಾಗಿರುವುದಿಲ್ಲ. ದೈವಿಕವಾದ ಒಂದು ಎಳೆಯ ಸೆಳೆತದಿಂದ ಪ್ರೇಮದ ಬಂಧನದಲ್ಲಿ ಬದುಕುತ್ತಾರೆ.

ಸ್ವತಹ ಕವಯಿತ್ರಿಯಾದ ಲೇಖಕಿ ರೇಣುಕಾ ನಿಡಗುಂದಿಯವರಿಗೆ ಅಮೃತಾ ಪ್ರೀತಂ ಅವರ ಕವಿತೆಗಳು ಕಾಡಿದಂತೆ, ಅವರ ಬದುಕೂ ಕಾಡಲು ತೊಡಗಿತು. ದೆಹಲಿಯಲ್ಲಿ ಬಹಳಷ್ಟು ವರ್ಷ ವಾಸವಾಗಿದ್ದರೂ ತನ್ನ ಪ್ರೀತಿಯ ಅಮೃತಾ ಪ್ರೀತಂ ಬದುಕಿರುವಾಗ ಅವರನ್ನು ಭೇಟಿಯಾಗದ ನೋವಿದ್ದರೂ ಅಲ್ಲಿ ಹೂವನ್ನು ಹುಡಕಲು ತೊಡಗಿದರು ರೇಣುಕಾ ನಿಡಗುಂದಿ.

ಹುಡುಕುತ್ತಾ ಒಂದು ದಿನ ಇಮ್ರೋಜ್ ಅವರ ಭೇಟಿಯಾಗುತ್ತದೆ. ಅಮೃತಾ ಅವರ ನಿಧನದ ನಂತರದ ದಿನಗಳಲ್ಲಿ ತನ್ನ ಪ್ರೇಮಿಯ ಜತೆ ಕಳೆದ ದಿನಗಳನ್ನೇ ವರ್ತಮಾನಗೊಳಿಸುತ್ತಾ ಬದುಕುತ್ತಿರುವ ಇಮ್ರೋಜ್‌ರನ್ನು ರೇಣುಕಾ ನಿಡಗುಂದಿಯವರು ಭೇಟಿಯಾಗಿ ಇಮ್ರೋಜ್ ಅವರ ನೆನಪಿನಿಂದ ತನ್ನ ಪ್ರಿಯ ಕವಯಿತ್ರಿ ಅಮೃತಾರನ್ನು ಹುಡುಕುತ್ತಾರೆ. ಇಂದು ಸುಮಾರು ಎಂಭತ್ತರ ಹರೆಯದಲ್ಲಿರುವ ಇಮ್ರೋಜ್ ಅದ್ಭುತ ಕಲಾವಿದನೇನೋ ಹೌದು. ಆದರೆ ರೇಣುಕಾ ನಿಡಗುಂದಿ ಅವರು ಬರೆಯುವಂತೆ ಆತನೊಬ್ಬ ಪ್ರೇಮವನ್ನು ದೈವಿಕಗೊಳಿಸಿದ ಪ್ರಿಯಕರ. “ಅಮೃತಾ ಉಕ್ಕಿ ಹರಿವ ನದಿಯಾದರೆ, ಇಮ್ರೋಜ್ ಸದಾ ನದಿಯ ಜೊತೆಜೊತೆಯಾಗಿ ಧೃಡವಾಗಿ ನಿಂತ ದಡ. ನದಿಯ ಹರಿವು, ಸೆಳೆತವನ್ನು ತನ್ನ ವಿಶಾಲವಾದ ಎದೆಯಲ್ಲಿ ತುಂಬಿ ಹಿಡಿವ ಧಾರಣಶಕ್ತಿ ದಡಕ್ಕಿದೆ. ಇದೇ ಇಮ್ರೋಜ್‌ರನ್ನು ಇತರರಿಗಿಂತ ಭಿನ್ನವಾಗಿಸುತ್ತದೆ. ಅವರ ಪ್ರತಿ ಮಾತಿನಲ್ಲೂ, ಉಸಿರಲ್ಲೂ ಅಮೃತಾರೇ ಇರುತ್ತಾರೆ…”

ತನ್ನ ಮೊದಲ ಕವನ ಸಂಕಲನ ಕಣ್ಣ ಕಣಿವೆ ಪ್ರಕಾಶನಗೊಂಡ ನಂತರವೂ ಉತ್ತಮ ಮೌಲಿಕ ಕವನಗಳನ್ನು ಬರೆಯುತ್ತಿರುವ ಕವಯಿತ್ರಿ ರೇಣುಕಾ ನಿಡಗುಂದಿ ಅವರು ಈ ನಡುವೆ ದಿಲ್ಲಿ ಡೈರಿಯ ಪುಟಗಳು ಕೃತಿಯನ್ನೂ ಪ್ರಕಟಿಸಿದ್ದಾರೆ. ಅದರ ನಂತರ ಬಂದ ಅಮೃತಾ ನೆನಪುಗಳು ಕೃತಿಯಲ್ಲಿ ಪಾರಂಪಾರಿಕ ಚೌಕಟ್ಟಿನಾಚೆಗೆ ಕಾವ್ಯಾತ್ಮಕ ಮತ್ತು ಭಾವನಾತ್ಮಕ ಬರಹಗಳಿಂದ ಹೊಸಕಾಲದ ಓದುಗರನ್ನು ಹಿಡಿದಿಟ್ಟು ಓದಿಸಿಕೊಂಡು ಹೋಗುವಂತಹ ಮೂರು ಲೇಖನಗಳಿವೆ. ಈ ಮೂರೂ ಬರಹಗಳು ರೇಣುಕಾ ನಿಡಗುಂದಿ ಅವರು ಇಮ್ರೋಜ್ ಅವರನ್ನು ಮೂರು ಬೇರೆ ಬೇರೆ ಸಂದರ್ಭಗಳಲ್ಲಿ ಭೇಟಿಯಾಗಿ ಅವರ ಜತೆ ನಡೆಸಿದ ಮಾತುಕತೆಯಿಂದ ಹುಟ್ಟಿದಂತಹ ಕತೆಗಳು.

ಇಮ್ರೋಜ್ ತನ್ನ ಪ್ರಿಯತಮೆಯ ಕುರಿತು, ಸುಮಾರು ಅರ್ಧ ಶತಮಾನಗಳಷ್ಟು ಸುದೀರ್ಘ ಒಡನಾಟಗಳಲ್ಲಿ ಪಡೆದುಕೊಂಡ ಅತ್ಯಮೂಲ್ಯ ಕ್ಷಣಗಳ ಕುರಿತು ರೇಣುಕಾ ನಿಡಗುಂದಿ ಅವರ ಜತೆ ತನ್ನ ಹೃದಯವನ್ನು ಬಿಚ್ಚಿ ಮಾತಾಡುತ್ತಾರೆ. ಈ ಕೃತಿಯಲ್ಲಿ ರೇಣುಕಾ ನಿಡಗುಂದಿಯವರ ಬರವಣಿಗೆಯ ಮೇಲುಗೈ ಏನೆಂದರೆ, ಲೇಖಕಿಯು ಇಮ್ರೋಜ್ ಅವರ ಮಾತುಗಳನ್ನು ಮಾತ್ರ ಬರೆಯುವುದಿಲ್ಲ. ಇಮ್ರೋಜ್ ಅವರು ಲೇಖಕಿಯ ಜತೆಗೆ ಇರುವಾಗ ಹೇಗಿರುತ್ತಾರೆ, ಅವರು ಮತ್ತು ಅಮೃತಾ ಪ್ರೀತಂ ಅವರ ಸಂಬಂಧಗಳು ಇಮ್ರೋಜ್ ಅವರ ಬದುಕಿನಲ್ಲಿ ಈಗ ಹೇಗೆ ಪ್ರತಿಬಿಂಬಿಸುತ್ತದೆ ಮತ್ತು ಅವರ ಬದುಕಿನಿಂದ ನಾವು ಏನನ್ನು ಹೆಕ್ಕಿಕೊಳ್ಳಬಹುದು ಎಂಬುದನ್ನು ನಮಗರಿವಿಲ್ಲದಂತೆ ಹೇಳುತ್ತಾರೆ. ಒಂದು ರೀತಿಯ ಮುಗ್ಧತೆಯಿಂದ, ತಾನು ಬರೆಯುತ್ತಿರುವ ನಾಯಕಿ ನಾಯಕರೆ ಪ್ರೇಮದೊಳಗಿನ ಉತ್ಕಟತೆಯಲ್ಲಿನ ಆಪ್ತತೆಯನ್ನು ಆಪ್ಯಾಯಮಾನವಾಗಿ ಓದುಗರಿಗೆ ತಿಳಿಸುತ್ತಾರೆ. ಜತೆಗೆ ಅವರ ಬದುಕಿನ ಕವಿತೆಗಳನ್ನು ಕನ್ನಡದಲ್ಲಿ ಓದುಗರಿಗೂ ತಿಳಿಸುತ್ತಾರೆ. ಪುಸ್ತಕದ ಕೊನೆಯಲ್ಲಿ ಇಮ್ರೋಜ್‌ರ ಮತ್ತು ಅಮೃತಾ ಪ್ರೀತಂ ಅವರ ಕವನಗಳೂ ಇವೆ. ಕವಯಿತ್ರಿಯಾಗಿ ನಾವು ಮೆಚ್ಚುವಂತಹ ಕವನಗಳನ್ನು ಬರೆಯುವ ರೇಣುಕಾ ನಿಡಗುಂದಿ ಅವರು ಬರೆದಿರುವ ಅಮೃತಾ ನೆನಪುಗಳು ಒಂದು ಕಾವ್ಯಾತ್ಮಕ ಸೆಲೆಯನ್ನು ಹೊಂದಿದೆ. ಕವಿತೆಗಳು, ಚಿತ್ರಕಲೆ, ಜತೆಗೆ ಬದುಕು ತುಂಬಾ ತುಂಬಿಕೊಂಡಿದ್ದ ಪ್ರೇಮದ ಶರಧಿ ಎಲ್ಲವನ್ನೂ ಅಮೃತ ನೆನಪುಗಳಲ್ಲಿ ಹಂಚಿಕೊಳ್ಳುವ ರೇಣುಕಾ ನಿಡಗುಂದಿ ಅವರು ಪ್ರೇಮರಸದಲ್ಲಿ ಅದ್ದಿದ ಪಾರಿಜಾತದ ಹೂಗಳ ನಡುವೆ ಓದುಗರನ್ನು ಕರೆದೊಯ್ಯುತ್ತಾರೆ.

ಅಮೃತಾ ಪ್ರೀತಂ, ಸಾಹಿರ್ ಲುಧ್ಯಾನ್ವಿ ಮತ್ತು ಇಮ್ರೋಜ್ ಎಲ್ಲರೂ ತುಂಬು ಬದುಕನ್ನು ಬಾಳಿದವರು. ಅವರ ಬದುಕಿನ ಉದ್ದಕ್ಕೂ ನಡೆದ ಸಂಗತಿಗಳು ಅದ್ಭುತವಾಗಿ ರೋಮಾಂಚಕಾರಿಯಾಗಿವೆ. ಅವರ ಕತೆಗಳು ಸುದೀರ್ಘ ಕಾದಂಬರಿಗೆ ನೈಜವಾಗಿ ವಸ್ತುಗಳಾಗುತ್ತವೆ. ರೇಣುಕಾ ನಿಡಗುಂದಿಯವರು ಇನ್ನೂ ಸ್ವಲ್ಪ ಪಾತ್ರಗಳ ಒಡನಾಟ ಮತ್ತು ಸಂಶೋಧನೆ ಮಾಡಿದರೆ ಕಾದಂಬರಿ ಹುಟ್ಟುವುದರಲ್ಲಿ ಕಷ್ಟವೇನಿಲ್ಲ. ಅ

*ಬಾಲಕೃಷ್ಣ ನಾಯ್ಕ್ ಡಿ.*

# ನಮ್ಮ ಮುಕುಟ ಮಣಿ

ಕೇವಲ ಭೂಪಟದಲ್ಲಿ ಮಾತ್ರ ಸುಂದರವಾಗಿ ಕಾಣುವುದು
ನಮ್ಮ ಭವ್ಯ ಭಾರತದ ಮುಕುಟ ಮಣಿ ಕಾಶ್ಮೀರ.
ಅಲ್ಲಿ ಹೋಗಿ ಬಂದಾಗಿನಿಂದ ಆಗಿರುವುದು
ಎನ್ನ ಹೃದಯ ಬರೀ ನೋವಿನ ಆಗರ.

ಪಟ್ನಿ ಟಾಪಿನ ಹಿಮಚ್ಛಾದಿತ ಸುಂದರ ಕಣಿವೆಯ
ಸೊಬಗನು ಸವಿಯುತ್ತ ಮೈಮರೆತು ನಿಂತಾಗ
ಕೇಳಿಸಿತೊಂದು ಹೃದಯ ಕರಗಿಸುವ ದೀನ ಸ್ವರ.
'ಅಮ್ಮಾ... ಅಮ್ಮಾಜಿ... ಇಸೇ ಬಹುತ್ ಭೂಕ್ ಲಗೀ ಹೈ
ದೆಖೋನಾ ಕಿತನಾ ರೋರಹೀ ಹೈ,
ಕುಛ ಖಾನಾ ಹೈ ತೋ ದೇ ದೋ"

ಸ್ವರ ಬಂದತ್ತ ಹಿಂದಿರುಗಿದಾಗ,
ಚೆಂಗುಲಾಬಿ ಕಪೋಲದ ಪುಟ್ಟ ಪೋರಿಯೊಂದು
ಕಟಕಟ ನಡಗುತ್ತಾ, ಕೆಂಚು ಕೂದಲನ್ನು ಹಿಂದೆ ಸರಿಸುತ್ತಾ,
ಹೊದ್ದ ಹರಿದ ಕಂಬಳಿಯನು ಜಗ್ಗುತ್ತಾ
ಕೈಯಲ್ಲಿದ್ದ ಗೇಣುದ್ದದ ಪುಟ್ಟ ಮಗುವಿನ
ಮೈ ಮುಚ್ಚಲು ಪರದಾಡುತ್ತಿದ್ದಳು.

ಇದೇನು, ಇಂಥ ಭೀಕರ ಚಳಿಯಲ್ಲಿ
ಈ ಪುಟ್ಟ ಕಂದನನ್ನ ಏಕೆ ಹೊತ್ತು ತಂದೆ?
ಪಾಪ ಮೈಮೇಲೆ ಬಟ್ಟೆಯಿಲ್ಲದೇ ನಡುಗುತ್ತಿಹನಲ್ಲ
ಒಬ್ಬಳೇ ಅಲೆಯುವುದು ಒಳ್ಳೇದಲ್ಲ,
ಹೀಗೆ ಬಿಕ್ಕೆ ಬೇಡುವುದೂ ಸರಿಯಲ್ಲ,
ನಿನ್ನಮ್ಮ ಹುಡುಕುತ್ತಿರಬಹುದು
ಬೇಗ ಮನೆಗೆ ಹೋಗು ಎಂದಾಗ

ಸುತ್ತಲೂ ಸತ್ತು ಬಿದ್ದವರ ರಾಶಿಯಲಿ
ನಮ್ಮವರೆಲ್ಲಿಹರೆಂದು ಹುಡುಕಲಿ ಅಮ್ಮಾಜಿ?
ಉಗ್ರರ ಗುಂಡುಗಳಿಗೆ, ಗುಂಡಿನುತ್ತರವ ನೀಡುತ್ತ
ನನ್ನ ಕೂಗಿಗೂ ಉತ್ತರಿಸದೆ, ಹಿಂತಿರುಗಿಯೂ ನೋಡದೇ
ಮುನ್ನುಗ್ಗುತ್ತಾ ಹೊರಟು ಹೋದರು ನನ್ನ ಬಾಬೂಜಿ...
ಈ ಪುಟ್ಟು ಕೂಸು ಯಾರದೋ ಎಂದು ನಾನರಿಯೆ
ನಾನೂ ಒಬ್ಬಂಟಿ, ಈಗ ನನ್ನ ಜೀವ ಈ ತುಂಟಿ.
ಯಮರೂಪಿ ಹಿಮಪದರಗಳ ಆಲಿಂಗನದಲಿ
ಅಮ್ಮನಿಗಾಗಿ ಅಳುತ್ತಿರುವವಳನ್ನು
ಅಮ್ಮಾಜೀ ನಾನು ಹಾಗೇ ಹ್ಯಾಗೆ ಬಿಟ್ಟು ಬಿಡಲಿ?
ನೀವೇ ಹೇಳಿ, ನಾ ಹ್ಯಾಗೆ ಇವಳನ್ನು ಸಂತೈಸಲಿ?

ಅವಳಿಗೆ ಉತ್ತರಿಸುವಷ್ಟು ಶಕ್ತಿ ನನ್ನಲ್ಲಿರಲಿಲ್ಲ,
ಅವಳ ನೋವು ನೋಡುವುದೂ ನನ್ನಿಂದ ಸಾಧ್ಯವಿಲ್ಲ.
ಕೇವಲ ಒಂದೊಪ್ಪೊತ್ತು ಊಟ ನೀಡಿದೆ,
ಹೊದೆಯಲು ಉಣ್ಣೆಯ ಬಟ್ಟೆ ಕೊಟ್ಟೆ,
ಅವಳ ಕಂಗಳಲ್ಲಿ ಹೂ ನಗುವ ಕಂಡಾಗ
ಆ ನಿಸ್ವಾರ್ಥ ಹೃದಯಕ್ಕೆ ಸಲಾಮು ಹೊಡೆದೆ.

ಚಿಗುರಿ ಅರಳಬೇಕಾದ ಪುಟ್ಟ ವಯಸಿನಲಿ
ಸಾವು- ನೋವುಗಳ ಮಣಭಾರ ಹೊತ್ತು
ಭಯದ ಕಾರ್ಮೋಡದ ಛಾಯೆಯಲಿ ಬಳಲುತ್ತ
ನಿಸ್ವಾರ್ಥ ಸೇವೆ ಮಾಡುವ ಪೋರಿಯನು ನೆನೆಯುತ್ತ ಬಂದೆ
ಇಂಥ ಅದೆಷ್ಟೂ ಮುಗ್ಧ ಜೀವಿಗಳು ನಲುಗುತ್ತಿರಬಹುದು?
ಪ್ರೀತಿ ಪ್ರೇಮದ ಸೆಲೆಯನ್ನು ಅರಸುತ್ತಿರಬಹುದು?

ಈ ಮುಕುಟ ಮಣಿಗಾಗಿ ಹೊಡೆದಾಡುತ್ತಿರುವ,
ಪ್ರತಿಷ್ಠೆಯ ಮರಣ ಮೃದಂಗ ಬಾರಿಸುತ್ತಿರುವ,
ರಕ್ತದೋಕುಳಿಯನು ಆಡುತ್ತಿರುವ ದೇಶಗಳ
ಭೀಷಣ ಯುದ್ಧ ಆದಷ್ಟು ಬೇಗ ಅಂತ್ಯಗೊಳ್ಳಲಿ.
ಪ್ರತಿ ಮಗುವಿಗೂ ಒಂದು ಬೆಚ್ಚಗಿನ ಮನೆ ಸಿಗಲಿ.
ಪ್ರತಿ ಮನೆಯಲ್ಲೂ ಹೊಸ ಮೊಗ್ಗು ಅರಳಲಿ.

**ಸವಿತಾ ಇನಾಮದಾರ್**

# ಇರುವೆ

ಕಪ್ಪಿರುವೆ ಕೆಂಪಿರುವೆ ಕಟ್ಟಿರುವೆ
ಕಪ್ಪಿನಲ್ಲಿರುವೆ ಕೆಂಪಿನಲ್ಲಿರುವೆ ನನ್ನನ್ನು ಕಟ್ಟಿರುವೆ
ಗುಡಿಸಲಲ್ಲಿರುವೆ ಅರಮನೆಯಲ್ಲಿರುವೆ
ಅಲ್ಲಿರುವೆ ಇಲ್ಲಿರುವೆ ಎಲ್ಲೆಲ್ಲೂ ನನ್ನಲ್ಲೂ ತುಂಬಿರುವೆ

ಸುಖದಲ್ಲಿರುವೆ ದುಃಖದಲ್ಲಿರುವೆ ಬೆಳಕಲ್ಲಿರುವೆ ಕತ್ತಲಲ್ಲಿರುವೆ
ಬಾನಲ್ಲಿರುವೆ ಭಾವಿಯಲ್ಲಿರುವೆ
ಚಂದ್ರಮನಲ್ಲಿರುವೆ ಚಕೋರಿಯಲ್ಲಿರುವೆ
ಇಹ, ಪರಗಳಲ್ಲಿರುವೆ ಜೀವನ್ಮರಣದಲ್ಲಿರುವೆ

ಚತುರ್ವೇದಗಳಲ್ಲಿರುವೆ ಪುರುಷಾರ್ಥಗಳಲ್ಲಿರುವೆ
ಪಂಚಭೂತಗಳಲ್ಲಿರುವೆ ಪಂಚಪ್ರಾಣಗಳಲ್ಲಿರುವೆ
ಪಂಚಾಂಗಗಳಲ್ಲಿರುವೆ ಪಂಚೇಂದ್ರಿಯಗಳಲ್ಲಿರುವೆ
ಷಡ್ರಸಗಳಲ್ಲಿರುವೆ ಅರಿಷಡ್ವರ್ಗಗಳಲ್ಲಿರುವೆ

ನವರತ್ನಗಳಲ್ಲಿರುವೆ ನವರಸಗಳಲ್ಲಿರುವೆ
ನವಬ್ರಹ್ಮಗಳಲ್ಲಿರುವೆ ನವಮಾಸಗಳಲ್ಲಿರುವೆ
ತ್ರಿಮೂರ್ತಿಗಳಲ್ಲಿರುವೆ ತ್ರಿಲೋಪಗಳಲ್ಲಿರುವೆ
ನನ್ನಮನದಲ್ಲಿರುವೆ ನನ್ನ ಹೃದಯಕಮಲದಲ್ಲಿರುವೆ

ನನ್ನ ಕೊನೆಯುಸಿರಿನಲ್ಲಿರುವೆ ಉಸಿರಿರುವ ತನಕ ನನ್ನ
ಕಣ ಕಣದಲ್ಲೂ ನೀನೇ ತುಂಬಿರುವೆ ನಲಿಯುತಿರುವೆ.

**ನರೇಂದ್ರ ಎ.**




## ಮಿಸ್ ಇಂಡಿಯಾ ಕಾಂಟಿನೆಂಟ್‌ನಲ್ಲಿ ರನ್ನರ್‌ಅಪ್ ಆದ ಅಮಿತಾ ದೇವ್

ಕುಮಾರಿ ಅಮಿತಾ ದೇವ್ ಹಿಮಾಚಲ ಪ್ರದೇಶದ ಸಿಮ್ಲಾದಲ್ಲಿ ಇದೇ ಜೂನ್ 19ರಂದು ನಡೆದ ಮಿಸ್ ಇಂಡಿಯಾ ಕಾಂಟಿನೆಂಟ್ ಸ್ಪರ್ಧೆಯಲ್ಲಿ ಅಂತಿಮ 16 ಸ್ಪರ್ಧಿಗಳಲ್ಲಿ ರನ್ನರ್‌ಅಪ್ ಆಗಿ ವಿಜೇತಳಾಗಿದ್ದಾರೆ. ಕುಮಾರಿ ಅಮಿತಾ ದೆಹಲಿ ಕರ್ನಾಟಕ ಸಂಘದ ಸದಸ್ಯರಾದ ಗಡಿ ಭದ್ರತಾ ಪಡೆಯಲ್ಲಿ ಸೇವೆ ಸಲ್ಲಿಸುತ್ತಿರುವ ಶ್ರೀ ದೇವೆಂದ್ರ ಮತ್ತು ಶ್ರೀಮತಿ ಆಶಾ ದೇವ್ ಅವರ ಪುತ್ರಿಯಾಗಿದ್ದಾರೆ. ಈ ಸ್ಪರ್ಧೆಯನ್ನು ಮುಂಬೈಯ ಅಮಾನ್ ಗಾಂಧಿ ಪ್ರೊಡಕ್ಷನ್ಸ್ ಅವರು ನಡೆಸಿದರು.

ದೇಶದ ವಿವಿಧ ರಾಜ್ಯಗಳಿಂದ ಹಲವಾರು ಸ್ಪರ್ಧಿಗಳು ಪ್ರತಿನಿಧಿಸಿದ್ದ ಈಚ್ ಸ್ಪರ್ಧೆಯಲ್ಲಿ ಕು. ಅಮಿತಾ ದೇವಿ ಕರ್ನಾಟಕ ರಾಜ್ಯದಿಂದ ಭಾಗವಹಿಸಿದರು. ಮೂಲತಃ ಶಿವಮೊಗ್ಗ ಜಿಲ್ಲೆಯ ಭದ್ರಾವತಿಯ ಅರಳಹಳ್ಳಿ ಗ್ರಾಮದವರಾದ ಕು. ಅಮಿತಾ ದೇವ್ ಕಳೆದ ವರ್ಷ ದೆಹಲಿಯಲ್ಲಿ ಅಲೀ ಕ್ಲಬ್ ನಡೆಸಿದ ಮಿಸ್ಟರ್ ಆಂಡ್ ಮಿಸ್ ಟೀನ್ ಇಂಡಿಯಾ ಸ್ಪರ್ಧೆಯಲ್ಲಿ ಮಿಸ್ ಸೇವಿಯರ್ ಆಗಿ ವಿಜೇತರಾಗಿದ್ದಾರೆ. ಅ

**ಅಭಿಮತ ವರದಿ**

# ದೆಹಲಿ ದೂರವಿಲ್ಲ

ಕಾಳು ಕೂಲಿಗಾಗಿ ದೂರದೂರಿಗೆ ದೆಹಲಿಗೆ ಬಂದ ನಾವು ನಮ್ಮೊಂದಿಗೆ ತಂದಿರುವುದು ನಮ್ಮ ಮಣ್ಣಿನ ಪರಿಮಳ, ನಮ್ಮ ಪರಂಪರೆಯ ತುಣುಕುಗಳು ಮತ್ತು ನಮ್ಮತನದ ಬಿಂಬಗಳು. ಅವುಗಳನ್ನು ಇಲ್ಲಿನ ಬಿಸಿಲಿನ ಬೇಗೆಗೆ ಕರಗಲು ಬಿಡದೇ, ಕೊರೆಯುವ ಚಳಿಗೆ ಹೆಪ್ಪುಗಟ್ಟದಂತೆ ನಮ್ಮದೇ ಜೋಳಿಗೆಯಲ್ಲಿ ಜೋಪಾನವಾಗಿ ಕಾಪಾಡಿಕೊಂಡು ಬಂದಿದ್ದೇವೆ. ಜತೆಗೆ ಇಲ್ಲಿ ದೊರಕುವ ಹೊಸತುಗಳನ್ನು ನಮ್ಮದೇ ಎನ್ನುವಂತೆ ಒಪ್ಪಿಕೊಂಡಿದ್ದೇವೆ.


ನಮ್ಮ ಮಣ್ಣಿನಲ್ಲಿ ಹುಟ್ಟಿದ ಅನೇಕ ಚಿತ್ರಕಲಾವಿದರು ದೆಹಲಿಯ ನೆಲದಲ್ಲಿ ಅರಳಿದ್ದಾರೆ. ಇಲ್ಲಿಯ ಹೊಸತನಗಳನ್ನು ಹೊತ್ತುಕೊಂಡು ನಮ್ಮ ಮಣ್ಣಿನ ಪರಿಮಳವನ್ನು ಇಲ್ಲಿ ಚೆಲ್ಲುತ್ತಿದ್ದಾರೆ. ಈ ಮಹಾನ್ ಚಿತ್ರಕಲಾವಿದರು ದೆಹಲಿಯಲ್ಲಿ ಕನ್ನಡದ ಮಣ್ಣಿನಲ್ಲಿ ಅರಳಿದ ಹೂಗಳನ್ನು ಮೂಡಿಸುತಾರೆ.

ಜತೆಗೆ ಬೇರೆಲ್ಲೋ ವೃತ್ತಿಯಲ್ಲಿದ್ದು ನಮ್ಮ ಮಣ್ಣಿನೊಳಗಿನ ಸುಗುಣಗಳು ನಮ್ಮವರ ಮೂಲಕ ಮತ್ತೆ ಇಲ್ಲಿ ಅರಳುವಂತೆ ಮಾಡಿದ್ದೇವೆ. ದೆಹಲಿ ಬಿಟ್ಟು ಹೋಗುವ ಬಾಲಚಂದ್ರ ಅಡ್ಕೋಳಿ ಅಂತಹವರಲ್ಲಿ ಒಬ್ಬರು. ನಾವಿಲ್ಲಿದ್ದು ಇಲ್ಲಿನ ಗಿಡಗಳಲ್ಲಿ, ತೋಟಗಳಲ್ಲಿ, ನಮ್ಮ ಮನೆಯ ಹೂಗಳನ್ನು ಹುಡುಕುತ್ತೇವೆ. ಅಮೃತ ನೆನಪುಗಳಲ್ಲಿ ರೇಣುಕಾ ನಿಡಗುಂದಿ ಅವರು ಪಂಜಾಬಿ ಮತ್ತು ಹಿಂದಿಯ ಹಿರಿಯ ಕವಿಯ ಕುರಿತು ಬರೆಯುತಾ ಆಪ್ತರಾಗುತ್ತಾರೆ. ಸೂಕ್ಷ್ಮ ಮನಸಿನ ಡಿ. ಉಮಾಪತಿಯವರು ದೆಹಲಿಗೆ ಎಂದೋ ಬಂದು ನೆಲೆಸಿ ಇಲ್ಲಿಯವರಾಗಿಯೇ ಹೋದ ತಮಿಳುನಾಡಿನಿಂದ ಬಂದ ಕನ್ನಡ ಕುಟುಂಬಗಳ ಕುರಿತು ತಮ್ಮ ಅಂಕಣದಲ್ಲಿ ಬರೆಯುತ್ತಾರೆ. ಅಭಿಮತದ ಈ ಸಂಚಿಕೆಯಲ್ಲಿ ಇವರೆಲ್ಲರ ಕುರಿತು ನೀವೀಗಾಗಲೇ ಓದಿರುವಿರಿ. ಜತೆಗೆ ದೆಹಲಿ ಕರ್ನಾಟಕ ಸಂಘದ ನಾಟಕ ಕಲಾವಿದರಿಗೆ ಹುಟ್ಟೂರಿನಲ್ಲಿ ದೊರೆತ ಪ್ರೋತ್ಸಾಹ ಮತ್ತು ಸಂಘದ ಆಡಳಿತ ಮಂಡಳಿ ಮೇಲೆ ತೋರಿದ ಅಭಿಮಾನದ ಬರಹಗಳು ನಮಗೆ ದೆಹಲಿ ದೂರದ ಊರು ಎಂದನಿಸುವುದಿಲ್ಲ.

ಬೆಳ್ಳಿ ಸಂಪುಟದ ಇನ್ನೊಂದೆರಡು ಸಂಚಿಕೆ ಉಳಿದಿದೆ. ಅಭಿಮತದ ಬಳಗದ ಬಹಳಷ್ಟು ಮಂದಿಯ ಬರಹಗಳು ವಿಶೇಷ ಸಂಚಿಕೆಗೆ ಬರುತ್ತಿವೆ. ಅಭಿಮತದ ಆತ್ಮೀಯ ಓದುಗರಾದ ನೀವು ಕೂಡಾ ಅಭಿಮತಕ್ಕೆ ಬರೆಯಿರಿ. ನಿಮ್ಮ ಬರಹಗಳಿಗೆ ಇಲ್ಲಿಯ ಪುಟಗಳು ಕಾದು ಕುಳಿತಿವೆ. ಬರೆದು ಕಳುಹಿಸಿ.

ಬಾನಾಡಿ

*ಬಾಲಕೃಷ್ಣ ನಾಯ್ಕ್ ಡಿ.*



# ವಿಶ್ವ ಪರಿಸರ ದಿನಾಚರಣೆ 2015




ಭಾರತೀಯ ಸಮಾಜ ಸೇವಾ ಟ್ರಸ್ಟ್ ಬೆಂಗಳೂರು, ಜೀವನವನ್ನು ರಕ್ಷಿಸಲು ಭೂಮಿಯನ್ನು ಸಂರಕ್ಷಿಸಿ, ಎಂಬ ಉದ್ದೇಶದಿಂದ "ಪ್ರತಿದಿನ ವಿಶ್ವ ಪರಿಸರ, ಜಲ, ಭೂಮಿ, ಓಝೋನ್, ಆಹಾರ, ಆರೋಗ್ಯ ದಿನಾಚರಣೆ"ಯಾಗಬೇಕೆಂಬ ಧ್ಯೇಯ ಹೊಂದಿದ್ದು, ಸತತ ಹದಿನೈದು ವರ್ಷಗಳಿಂದ ವಿವಿಧ ಶಿಕ್ಷಣ ಸಂಸ್ಥೆ ಮತ್ತು ಅನೇಕ ಸಾರ್ವಜನಿಕ ಸ್ಥಳಗಳಲ್ಲಿ ಪರಿಸರ ಸಂರಕ್ಷಣೆ ಮತ್ತು ಜಾಗೃತಿಯ ಬಗ್ಗೆ ಅಪಾರ ಚಿಂತನೆ ನಡೆಸಿ ಸರ್ವರಿಗೂ ಪರಿಸರ ಶಿಕ್ಷಣ ನೀಡುತ್ತಿದ್ದು, 57 ವಿವಿಧ ಆಂದೋಲನಗಳಡಿಯಲ್ಲಿ 2800 ಕ್ಕೂ ಹೆಚ್ಚು ಯೋಜನೆಗಳು ಮತ್ತು ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಿದೆ.

ವಿಶ್ವ ಪರಿಸರ ದಿನದ ಅಂಗವಾಗಿ ಜೂನ್ 05, 2015 ರಂದು ರೋಟರಿ ಬೆಂಗಳೂರು ಸಹಯೋಗದೊಂದಿಗೆ ಬೆಂಗಳೂರಿನ ಜಿ. ಎಸ್. ಇಂಗ್ಲೀಷ್ ಶಾಲೆಯಲ್ಲಿ ಹಮ್ಮಿಕೊಂಡಿದ್ದ ವಿದ್ಯಾರ್ಥಿ ಪರಿಸರ ಸಂರಕ್ಷಣ ವಿಚಾರ ಸಂಕಿರಣ, ಸಸಿ ವಿತರಣೆ ಮತ್ತು ಸಸಿ ನೆಡುವ ಕಾರ್ಯಕ್ರಮವನ್ನು ಸಂಸ್ಥಾಪಕ ಅಧ್ಯಕ್ಷರಾದ ಖ್ಯಾತ ಪರಿಸರವಾದಿ ಶಿವಮಲ್ಲುರವರು ಉದ್ಘಾಟಿಸಿ, ಮಾತನಾಡುತ್ತಾ ಪರಿಸರ ಸಂರಕ್ಷಣ ಕಾರ್ಯಪ್ರವೃತ್ತಿ ರಹಿತ ಜೀವನ ಮಾರಣಾಂತಿಕ ರೋಗಗಳಿಗೆ ಕಾರಣ ಆದ್ದರಿಂದ ಪರಿಸರ ಸಂರಕ್ಷಣೆ ಎಲ್ಲರ ಆದ್ಯ ಕರ್ತವ್ಯ ಎಂದು ತಿಳಿಸಿದರು. "ಜೀವನವನ್ನು ರಕ್ಷಿಸಲು ಭೂಮಿಯನ್ನು ಸಂರಕ್ಷಿಸಿ," ಎಂಬ ವಿಚಾರ ಸಂಕಿರಣವನ್ನು ದೆಹಲಿ ಕರ್ನಾಟಕ ಸಂಘದ ಸಹಯೋಗದಲ್ಲಿ ಹಮ್ಮಿಕೊಂಡು ಪರಿಸರ ಸಂರಕ್ಷಣೆ ಸೇವೆಗೆ ನೆರವಾಗಬೇಕೆಂದು ದೆಹಲಿ ಕರ್ನಾಟಕ ಸಂಘದ ಉಪಾಧ್ಯಕ್ಷರು ಮತ್ತು ಪ್ರಧಾನ ಕಾರ್ಯದರ್ಶಿಗಳನ್ನು ವಿನಂತಿಸಿದರು.

ವಿದ್ಯಾರ್ಥಿ ಪರಿಸರ ಪ್ರಶಸ್ತಿ ವಿತರಿಸಿ ದೆಹಲಿ ಕರ್ನಾಟಕ ಸಂಘದ ಉಪಾಧ್ಯಕ್ಷರಾದ ಶ್ರೀಮತಿ ಆಶಾಲತ ಮಹಾದೇವ ಮಾತನಾಡುತ್ತಾ ಕೇವಲ ಸಭಾ ಸಮಾರಂಭಗಳಿಗೆ ಮಾತ್ರ ಪರಿಸರ ವಿಷಯ ಮೀಸಲಾಗಿರುವ ಕಾರಣ ಇಂದಿನ ಹವಾಮಾನ ವೈಪರಿತ್ಯಕ್ಕೆ ಅನುವು ಮಾಡಿಕೊಡುತ್ತಿದ್ದೇವೆ. ವಿದ್ಯಾರ್ಥಿ ಸಮುದಾಯವು ಶಾಲೆಯಲ್ಲಿ ಕಲಿತಿದ್ದನ್ನು ದೈನಂದಿನ ಜೀವನದಲ್ಲಿ ಅಳವಡಿಸಿಕೊಂಡು ಆರೋಗ್ಯಜೀವನ ನಡೆಸಿಕೊಳ್ಳಬೇಕೆಂದು ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡಿ, ಪ್ಲಾಸ್ಟಿಕ್ ಅವಲಂಬನೆ ಜೀವನದಿಂದ ಹೊರಬರಲು ಪ್ಲಾಸ್ಟಿಕ್ ಪರ್ಯಾಯವಾದ ಪರಿಸರ ಸ್ನೇಹಿ ವಸ್ತುಗಳನ್ನು ಬಳಸಲು ತಾವು ಪಣತೊಟ್ಟು ಸರ್ವರೂ ಅದೇರೀತಿ ಪರಿಸರ ಸಂರಕ್ಷಣೆಗೆ ಸಹಕರಿಸಲು ಕರೆನೀಡಿದರು.

ದೆಹಲಿ ಕರ್ನಾಟಕ ಸಂಘದ ಪ್ರಧಾನ ಕಾರ್ಯದರ್ಶಿಗಳಾದ ಸಿ.ಎಂ. ನಾಗರಾಜ ರವರು ಮಾತನಾಡುತ್ತಾ ಅಭಿವೃದ್ಧಿ ಹೆಸರಿನಲ್ಲಿ ನೈಸರ್ಗಿಕ ಸಂಪನ್ಮೂಲಗಳ ಮಾರಣಹೋಮ ನಡೆಯುತ್ತಿರುವುದು ಭೂತಾಪಮಾನ ಹೆಚ್ಚಾಗಲು, ಸುನಾಮಿ, ಭೂಕಂಪ ಹೀಗೆ ಅನೇಕ ಪ್ರಕೃತಿ ವಿಕೋಪಗಳಿಂದ ಸಾವು ನೋವುಗಳು ಹೆಚ್ಚಾಗುತ್ತಿವೆ. ಆದ್ದರಿಂದ ನಾವೆಲ್ಲ ಮನೆಗೊಂದು ಮರ ಊರಿಗೊಂದು ವನ ಎಂಬ ಸಂಪ್ರದಾಯವನ್ನು ಪಾಲಿಸಬೇಕೆಂದು ಕರೆ ಕೊಟ್ಟರು.

ಸಸಿ ನೆಟ್ಟು ಮಾತನಾಡಿದ ರೋಟರಿ ಸಂಸ್ಥೆ ಬೆಂಗಳೂರಿನ ರೊಟೆರಿಯನ್‌ರಾದ ಶ್ರೀ ಬಿ. ಆರ್. ಶ್ರೀಧರ್ ಹಸಿರೆ ಉಸಿರು ಎಂಬುದು ಪರಿಸರ ಸಭೆಗಳಲ್ಲಿ ಹೇಳುವ ಮಾತಾಗಿದೆಯೆ ವಿನಃ ನಿಜ ಜೀವನದಲ್ಲಿ ಹಸಿರೆ ನಮಗೆ ಉಸಿರು ನೀಡುತ್ತದೆ ಎಂಬ ನಂಬಿಕೆಯನ್ನು ಮರೆತು ಮರಗಳನ್ನು ಕಡಿದು ಡಾಂಬರೀಕರಣ ಮತ್ತು ನಗರೀಕರಣಕ್ಕೆ ಮುಂದಾಗಿರುವುದು ಮುಂದಿನ ಪೀಳಿಗೆಗೆ ಪರಿಸರವೇ ಅಘಾತಕಾರಿಯಾಗಿ ಸಂಭವಿಸಬಹುದಾಗಿದೆ. ಮಕ್ಕಳಿಗೆ ಮತ್ತು ಪೊಷಕರಿಗೂ ಪರಿಸರ ಸಂರಕ್ಷಣೆಯಲ್ಲಿ ಮುಂದಾಗುವಂತೆ ಕರೆನೀಡಿದರು.

ಕಾರ್ಯಕ್ರಮದಲ್ಲಿ ಭಾರತೀಯ ಸಮಾಜ ಸೇವಾ ಟ್ರಸ್ಟ್ ಬೆಂಗಳೂರಿನ ಸಂಸ್ಥಾಪಕ ಅಧ್ಯಕ್ಷರಾದ ಖ್ಯಾತ ಪರಿಸರವಾದಿ ಶಿವಮಲ್ಲುರವರು, ರೋಟರಿ ಸಂಸ್ಥೆ ಬೆಂಗಳೂರಿನ ರೊಟೆರಿಯನ್‌ರಾದ ಶ್ರೀ ಬಿ. ಆರ್. ಶ್ರೀಧರ್, ದೆಹಲಿ ಕರ್ನಾಟಕ ಸಂಘದ ಉಪಾಧ್ಯಕ್ಷರಾದ ಶ್ರೀಮತಿ ಆಶಾಲತ ಮಹಾದೇವ್, ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಸಿ.ಎಂ. ನಾಗರಾಜ, ಸದಸ್ಯರುಗಳಾದ ಶ್ರೀ ಮಹಾದೇವ್, ಶ್ರೀಮತಿ ಶಿಲ್ಪಾ ಹರಿಪ್ರಿಯಾ, ಶ್ರೀ ಹರಿಪ್ರಿಯಾ ಹೀಗೆ ಅನೇಕರು ಉಪಸ್ಥಿತರಿದ್ದರು. ಅ

***ಮಹದೇವ್***

**SAUJANYA** PRINTING PRESS
A HOUSE OF QUALITY PRINTING

ರಾಷ್ಟ್ರದ ರಾಜಧಾನಿಯಲ್ಲಿ ಕನ್ನಡಿಗರೊಬ್ಬರ ಬಹುವರ್ಣದ ಸುಸಜ್ಜಿತ ಮುದ್ರಣಾಲಯ
ಸೌಜನ್ಯ ಪ್ರಿಂಟಿಂಗ್ ಮತ್ತು ಎಚ್.ಪಿ. ಗ್ರಾಫಿಕ್ ಪ್ರಿಂಟರ್ಸ್
ಇಲ್ಲಿ ಎಲ್ಲಾ ಬಗೆಯ ಮುದ್ರಣ ಕಾರ್ಯಗಳನ್ನು ಸಮಯಕ್ಕೆ ಸರಿಯಾಗಿ ಅಚ್ಚುಕಟ್ಟಾಗಿ ಮಾಡಿಕೊಡಲಾಗುವುದು.
ಪ್ರೊಸೆಸಿಂಗ್, ಪ್ಲೇಟ್ ಮೇಕಿಂಗ್, ಪ್ರಿಂಟಿಂಗ್ ಮತ್ತು ಬೈಂಡಿಂಗ್ ಕೆಲಸಗಳಿಗಾಗಿ ದಯವಿಟ್ಟು ಸಂಪರ್ಕಿಸಿ

C-95, Okhla Industrial Area Phase-I, New Delhi – 110 020

E-MAIL: saujanyapp2010@gmail.com / hpgp2006@gmail.com
PHONE: 011-40520770 MOBILE:9811104398,,9811604398

Delhi Karnataka Sangha Abhimatha Monthly,
July-2015, Vol. No.25, Issue No.10, Price Rs.1/- RNI Regn. No. 53405/91, DL-SW-1/4016/13-15
Printout Date : July 8th / 9th, Postal Date :10th / 11th, Total Pages-16
Printed & Published by C.M. Nagaraja, General Secretary on behalf of Delhi Karnataka Sangha (R)
Rao Tularam Marg, Sector-12, R.K.Puram, New Delhi-110022, Tel: 26109615
Printed at Saujanya Printing Press C-95, Okhla Industrial Area, Phase-I, New Delhi-110020, Tel: 40520770, Editor: Balakrishna Naik D.

## ಹೆಚ್ಚಿದ ಜವಾಬ್ದಾರಿ

ಬೆಂಗಳೂರಿನಲ್ಲಿ ದೆಹಲಿ ಕರ್ನಾಟಕ ಸಂಘದ ಪದಾಧಿಕಾರಿಗಳನ್ನು ಅಭಿನಂದಿಸಿದ ಸಂದರ್ಭ.

ಇನ್ನಷ್ಟು ಕನ್ನಡದ ಕೆಲಸಗಳನ್ನು ದೆಹಲಿಯಲ್ಲಿ ಮಾಡಲು ಹುರುಪು.

ಜತೆಗೆ ಕನ್ನಡಿಗರು ಕೊಟ್ಟ ರಾಯಭಾರತ್ವದ ದೊಡ್ಡ ಜವಾಬ್ದಾರಿ









